ಪ್ರೀತಿಯ 'ಮಾಸ್ಟ್ರು' ಇನ್ನು ನಮ್ಮ ನಡುವೆ ಇಲ್ಲ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿಗಳು, ಕೇಂದ್ರ ಸಮಿತಿ ಸದಸ್ಯರು, ಮಾಜಿ ಶಾಸಕರು, ಕರ್ನಾಟಕದ ದುಡಿಯುವ ಜನರ ಪತ್ರಿಕೆ 'ಐಕ್ಯರಂಗ'ದ ಸಂಪಾದಕರು ಹಾಗೂ ಎಲ್ಲಕ್ಕೂ ಮಿಗಿಲಾಗಿ ಇಡೀ ದುಡಿಯುವ ವರ್ಗದ ಚಳುವಳಿಯ ಪ್ರೀತಿಯ 'ಮಾಸ್ಟ್ರು' ಕಾಂ|| ಪಿ. ರಾಮಚಂದ್ರರಾವ್ ಸೆಪ್ಟಂಬರ್ 18, 1998ರ ಮುಂಜಾನೆ 1.00 ಗಂಟೆಗೆ ನವದೆಹಲಿಯ ರಾಮ್‌ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ದೆಹಲಿಯಲ್ಲಿ ಅಂದು ಆರಂಭವಾಗಲಿದ್ದ ಕೇಂದ್ರ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಅವರು ದೆಹಲಿಗೆ ತೆರಳಿದ್ದರು.


ಕಳೆದ 16 ವರ್ಷಗಳಿಂದ ಸಿ.ಪಿ.ಐ(ಎಂ)ನ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿಯೂ, 'ಐಕ್ಯರಂಗದ ಸಂಪಾದಕರಾಗಿಯೂ ದುಡಿದಿರುವ ಕಾಮ್ರೇಡ್ ಪಿ. ರಾಮಚಂದ್ರರಾವ್ ಜನಿಸಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಪಾರ್ಪಾಜೆಯಲ್ಲಿ 70 ವರ್ಷಗಳ ಹಿಂದೆ ಏಪ್ರಿಲ್ 27 1929 ರಂದು. 1940ರ ದಶಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ರಾಷ್ಟ್ರೀಯ ವಿಮೋಚನಾ ಆಂದೋಲನದತ್ತ ಆಕರ್ಷಿತರಾದ ಅವರು ಆಗಿನ ಮದ್ರಾಸ್ ಪ್ರಾಂತ್ಯದ ಬ್ರಿಟಿಷ್ ಗವರ್ನರ್ 'ನಾಯ್'ನ ಮಂಗಳೂರು ಭೇಟಿಯನ್ನು ಬಹಿಷ್ಕರಿಸುವ ಆಂದೋಲನದಲ್ಲಿ, 1942ರಲ್ಲಿ ವಕೀಲರುಗಳು ನ್ಯಾಯಾಲಯಗಳಲ್ಲಿ ಹಾಜರಾಗದಂತೆ ತಡೆಯುವ ಚಳುವಳಿಯಲ್ಲಿ, ಇನ್ನೂ ಇಂತಹ ಹಲವು ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಸ್ವಾತಂತ್ರ್ಯಾನಂತರ ಅಧ್ಯಾಪಕ ವೃತ್ತಿ ಕೈಗೊಂಡು 'ಮಾಸ್ಟ್ರು' ಆದ ಅವರು ಅದೇ ವೇಳೆಗೆ ಮಂಗಳೂರಿನಲ್ಲಿ ಹೆಚ್ಚುತ್ತಿದ್ದ ಕಾರ್ಮಿಕರ ಹೋರಾಟಗಳತ್ತ ಆಕರ್ಷಿತರಾದರು, ಆ ಮೂಲಕ ಸ್ವಾತಂತ್ರ್ಯ ಕನಸುಗಳನ್ನು ನನಸಾಗಿಸಲು ಹೋರಾಟ ಮುಂದುವರೆಸಿದ್ದ ಕಮ್ಯುನಿಸ್ಟ್ ಆಂದೋಲನದತ್ತವೂ ಆಕರ್ಷಿತರಾದರು. ಕಾರ್ಮಿಕರಿಗೆ ರಾತ್ರಿ ಶಾಲೆಗಳಲ್ಲಿ ಪಾಠಗಳನ್ನು ತೆಗೆದುಕೊಳ್ಳುತ್ತಿದ್ದ 'ಮಾಸ್ಟ್ರು' ಈ ಪ್ರಕ್ರಿಯೆಯಲ್ಲಿಯೇ ಮಾರ್ಕ್ಸ್‌ವಾದದ ಮೂಲ ಪಾಠಗಳನ್ನು ಅರಗಿಸಿಕೊಂಡರು.

1952ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದ ಅವರು 1960 ರಲ್ಲಿ ರಾಜ್ಯ ಸಮಿತಿಗೆ ಆಯ್ಕೆಯಾದರು. 1961ರಲ್ಲಿ ಅಧ್ಯಾಪಕ ವೃತ್ತಿಯನ್ನು ತೊರೆದು ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾದರು. ಬೀಡಿ, ಹೆಂಚು, ಮತ್ತಿತರ ಅಸಂಘಟಿತ ಬಡ ಕಾರ್ಮಿಕರ ನಡುವೆ ದುಡಿಯಲಾರಂಭಿಸಿದ ಕಾಂ|| ಪಿ. ರಾಮಚಂದ್ರರಾವ್ ಎಐಟಿಯುಸಿಯ ಒಬ್ಬ ಪ್ರಮುಖ ಮುಖಂಡರಾಗಿ ಬೆಳೆದರು.

ಕಮ್ಯುನಿಸ್ಟ್ ಆಂದೋಲನದಲ್ಲಿ ಒಡಕು ಬಂದಾಗ ಸಿ.ಪಿ.ಐ.(ಎಂ)ನೊಂದಿಗೆ ದೃಢವಾಗಿ ನಿಂತು ಕಾರ್ಮಿಕ ಆಂದೋಲನ ಮತ್ತು ಕಮ್ಯುನಿಸ್ಟ್ ಆಂದೋಲನವನ್ನು ಕ್ರಾಂತಿಕಾರಿ ದಾರಿಯಲ್ಲಿ ಮುಂದೊಯ್ಯುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಈ ಪ್ರಯತ್ನದಲ್ಲಿ ಸಿಐಟಿಯು ಸ್ಥಾಪನೆಗೊಂಡಾಗ ಅವರು ಸಿಐಟಿಯು ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿಯಾದರು. 1970ರ ದಶಕದಲ್ಲಿ ಸಂಕುಚಿತ ಪಂಥವಾದ ಮತ್ತು ವಿಚ್ಛಿದ್ರ ಪ್ರಯತ್ನಗಳ ವಿರುದ್ಧ ಹೋರಾಟದಲ್ಲಿ ಪ್ರಮುಖಪಾತ್ರ ವಹಿಸಿದ ಕಾಂ|| ಪಿ. ರಾಮಚಂದ್ರರಾವ್ ಈ ಘಟ್ಟದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ದುಡಿದರು.

ಕಿಸಾನ್ ಸಭಾದ ರಾಜ್ಯ ಘಟಕವನ್ನು ವಿಚ್ಛಿದ್ರ ಹಾಗೂ ಸಂಕುಚಿತ ಪಂಥವಾದಿ ತಪ್ಪುಗಳಿಂದ ತತ್ತರಿಸಿದಾಗ ಅದನ್ನು ಸರಿದಾರಿಗೆ ತಂದು ಮತ್ತೆ ಕಟ್ಟಿ ಬೆಳೆಸುವ ಜವಾಬ್ದಾರಿಯನ್ನು ಹೊತ್ತ ಅವರು ಅದಕ್ಕಾಗಿ ರಾಜ್ಯದ ಮೂಲೆ-ಮೂಲೆಗಳಲ್ಲಿ ಸಂಚರಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ನಂತರ ಅಧ್ಯಕ್ಷರಾಗಿ ಅವರು ರಾಜ್ಯದ ರೈತ ಆಂದೋಲನಕ್ಕೆ ಸಲ್ಲಿಸಿದ ಸೇವೆ ಅವಿಸ್ಮರಣೀಯ. ಅವರ ಅಕಾಲಿಕ ಮರಣದ ವೇಳೆಗೆ ಅದರ ಉಪಾಧ್ಯಕ್ಷರೂ, ಕೇಂದ್ರ ಕಿಸಾನ್ ಸಮಿತಿಯ ಸದಸ್ಯರೂ ಆಗಿದ್ದರು.

1982ರಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿಯನ್ನು ತೆಗೆದುಹಾಕಬೇಕಾಗಿ ಬಂದಾಗ ಈ ಜವಾಬ್ದಾರಿ ಕಾಂ|| ಪಿ. ರಾಮಚಂದ್ರರಾವ್‌ರ ಹೆಗಲ ಮೇಲೆ ಬಿತ್ತು. ಕಳೆದ 16 ವರ್ಷಗಳಿಂದ ಅವರು ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಬಂದಿದ್ದರು. ಇದಕ್ಕೆ ಮೊದಲು ಅವರು ಎರಡು ದಶಕಗಳ ಕಾಲ ಸಿಪಿಐ(ಎಂ) ನ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. 1985 ರಲ್ಲಿ ಸಿಪಿ(ಎಂ)ನ 12ನೇ ಮಹಾಧಿವೇಶನದಲ್ಲಿ ಅವರು ಕೇಂದ್ರ ಸಮಿತಿಗೆ ಆಯ್ಕೆಯಾದರು.



ವಿದ್ಯಾರ್ಥಿ ಯುವಜನರ, ಇತರ ಜನವಿಭಾಗಗಳ ಆಂದೋಲನಗಳಿಗೆ ಹಾಗೂ ಸಾಂಸ್ಕೃತಿಕ ಚಳುವಳಿಗಳಿಗೆ ತುಂಬು ಮನಸ್ಸಿನ ಬೆಂಬಲ ಹಾಗೂ ಪ್ರೋತ್ಸಾಹ ನೀಡುತ್ತಿದ್ದ ಎಲ್ಲರ ಪ್ರೀತಿಯ 'ಮಾಸ್ಟ್ರು' ಎಷ್ಟು ಸರಳರೋ ಅಷ್ಟೇ ಆದರ್ಶ ಕಮ್ಯುನಿಸ್ಟರು. ದುಡಿವ ಜನರ ಹೋರಾಟದ ನಡುವಿನಲ್ಲೇ ಬದುಕಿ-ಬೆಳೆದ ಇವರು ಸರಳತೆ, ಸಜ್ಜನಿಕೆಯ ಪ್ರತೀಕ. ವಿಪರೀತ ಪುಸ್ತಕ ಪ್ರೀತಿಯನ್ನು ಹೊಂದಿದ್ದ ಇವರಿಗೆ ತತ್ತ್ವಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ಸಾಹಿತ್ಯ, ಗಣಿತ, ವಿಜ್ಞಾನ ಹೀಗೆ.... ಎಲ್ಲಾ ಕ್ಷೇತ್ರಗಳ ಜ್ಞಾನ - ಅನುಭವ ಅಗಾಧವಾದದ್ದು. ಕಮ್ಯುನಿಸ್ಟ್ ತತ್ವಗಳ ವಿಚಾರದಲ್ಲಿ ಇವರದು ರಾಜಿಯಿಲ್ಲದ ಹೋರಾಟ.

ಕಾಮ್ರೇಡ್ ಪಿ. ರಾಮಚಂದ್ರರಾವ್ ಅವರ ಆಕಸ್ಮಿಕ ನಿಧನ ರಾಜ್ಯದ ದುಡಿಯುವ ಜನರಿಗೆ, ಅವರ ಅಪಾರ ಅಭಿಮಾನಿಗಳಿಗೆ ಒಂದು ಆಘಾತಕರ ಸುದ್ದಿ ಎಂದು ಕಂಬನಿ ಮಿಡಿದಿರುವ ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಪಕ್ಷವನ್ನು ವಿಸ್ತರಿಸುವ ಅವರ ಅವಿರತ ಪ್ರಯತ್ನ ಸದಾ ಸ್ಮರಣೀಯ ಎಂದಿದೆ. ಅವರ ನಿಧನ ಕರ್ನಾಟಕದ ದುಡಿಯುವ ಜನತೆಯ ಆಂದೋಲನ, ರಾಜ್ಯ ಕಮ್ಯುನಿಸ್ಟ್ ಆಂದೋಲನಕ್ಕೆ ತುಂಬಲಾರದ ನಷ್ಟ ಎಂದು ಹೇಳುತ್ತಾ ಅವರ ದುಃಖತಪ್ತ ಮಡದಿ, ಮೂವರು ಹೆಣ್ಣುಮಕ್ಕಳು ಹಾಗೂ ಕುಟುಂಬದ ಇತರ ಸದಸ್ಯರಿಗೆ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿವೆ.

ಒಂದು ಶೋಷಣಾರಹಿತವಾದ ಸಮಾನತೆಯ ಸಮಾಜದ ನಿರ್ಮಾಣದ ತಮ್ಮ ಹೋರಾಟದಲ್ಲಿ ಪತ್ರಿಕೆ ಒಂದು ಬಲವಾದ ಅಸ್ತ್ರ ಎಂಬ ದೃಢ ವಿಶ್ವಾಸದಿಂದ 'ಐಕ್ಯರಂಗ'ದ ಗುಣಮಟ್ಟ, ಪ್ರಸಾರವನ್ನು ವಿಸ್ತರಿಸುವಲ್ಲಿ ಸದಾ ಅಪಾರ ಕಾಳಜಿಯಿಂದ ಮಾತನಾಡುತ್ತಿದ್ದವರು, ದುಡಿಯುತ್ತಿದ್ದವರು ಕಾಮ್ರೇಡ್ ಪಿ. ರಾಮಚಂದ್ರರಾವ್. ಈ ಪ್ರಿಯ ಸಂಪಾದಕ ಮಾಸ್ಟ್ರಿಗೆ 'ಐಕ್ಯರಂಗ'ದ ಕೆಂಪು ವಂದನೆ.

ಕಾಮ್ರೇಡ್ ಪಿ. ರಾಮಚಂದ್ರರಾವ್ ನಿಮಗಿದೋ ಲಾಲ್ ಸಲಾಂ!

ಕೇಂದ್ರ ಸಮಿತಿ ಶ್ರದ್ಧಾಂಜಲಿ

ಸೆಪ್ಟಂಬರ್ 18 ರಂದು ಸಭೆ ಸೇರಿದ್ದ ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಕಾಮ್ರೇಡ್ ಪಿ. ರಾಮಚಂದ್ರರಾವ್ ನಿಧನದ ಬಗ್ಗೆ ಒಂದು ಸಂತಾಪ ನಿರ್ಣಯ ಕೈಗೊಂಡು "ಈ ಸಮರ್ಪಿತ ಕಮ್ಯುನಿಸ್ಟ್ ನಾಯಕನ ನೆನಪಿಗೆ ಶ್ರದ್ಧಾಂಜಲಿ" ಅರ್ಪಿಸಿದೆ.

ಕಾಮ್ರೇಡ್ ರಾಮಚಂದ್ರರಾವ್ ತಾನು ವಹಿಸಿಕೊಂಡ ಪ್ರತಿಯೊಂದು ಜವಾಬ್ದಾರಿಯಲ್ಲೂ ಸಮರ್ಪಿತ ಸೇವೆ ಸಲ್ಲಿಸಿ ಎಲ್ಲರ ಗಮನ ಸೆಳೆದವರು. ಶಾಲಾ ಅಧ್ಯಾಪಕರಾಗಿ ಅವರು ಜನಗಳ ನಡುವೆ ಉನ್ನತ ಗೌರವ ಹೊಂದಿದ್ದರು. ಕಾರ್ಮಿಕ ಮುಖಂಡನಾಗಿ ಅವರು ಕಾರ್ಮಿಕ ವರ್ಗದ ನಡುವೆ ಅವಿಶ್ರಾಂತವಾಗಿ ದುಡಿದರು ಹಾಗೂ ಕಿಸಾನ್ ಸಭಾದ ಮುಖಂಡನಾಗಿ ಅವರು ರೈತ ಆಂದೋಲನವನ್ನು ಬೆಳೆಸಲು ಶ್ರದ್ಧೆಯಿಂದ ದುಡಿದರು. ಸರಳತೆ, ಸಜ್ಜನ ವರ್ತನೆಗೆ ಹೆಸರಾದವರು ಅವರು. ಅವರ ನಿಧನದಿಂದ ಕರ್ನಾಟಕದ ಎಡ ಆಂದೋಲನ ದೊಡ್ಡ ನಷ್ಟವೊಂದನ್ನು ಅನುಭವಿಸಿದೆ ಎಂದು ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಶ್ರದ್ಧಾಂಜಲಿ ಅರ್ಪಿಸಿದೆ.

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸೆಪ್ಟಂಬರ್ 21-27, 1998 ರೂ. 2.00

ಸಂಪುಟ 21 ಸಂಚಿಕೆ 39

ಇತಿಹಾಸದ ಪುಟಗಳಿಂದ

'ನಿಮ್ಮ ಬಂದೂಕುಗಳನ್ನು ಸರ್ಕಾರದ ವಿರುದ್ಧ ತಿರುಗಿಸಿ'

ಕಾರ್ಲ್ ಲೈಬ್ ನೆಕ್ತ್

1914 - ಮೊದಲ ಮಹಾಯುದ್ಧ ಆರಂಭವಾಗಿದೆ. ಜರ್ಮನ್ ಪಾರ್ಲಿಮೆಂಟಿ (ರೈಸ್‌ತಾಗ್) ನಲ್ಲಿ ಯುದ್ಧ ಬಜೆಟ್ ಬಗ್ಗೆ ಚರ್ಚೆ ನಡೀತಾ ಇದೆ. ಮುಖ್ಯ ವಿರೋಧ ಪಕ್ಷ ಜರ್ಮನ್ ಸೋಶಿಯಲ್ ಡೆಮೊಕ್ರಾಟಿಕ್ ಪಾರ್ಟಿ ಸರ್ಕಾರದ ಪ್ರಸ್ತಾಪಗಳಿಗೆ ಬೆಂಬಲ ನೀಡಿ ಮತ ನೀಡುವುದಾಗಿ ನಿರ್ಧರಿಸಿದೆ. ಆದರೆ ಆ ಪಕ್ಷದ ಇಬ್ಬರು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ, ಸರ್ಕಾರದ ಪ್ರಸ್ತಾಪಗಳನ್ನು ವಿರೋಧಿಸಿ ಮಾತನಾಡಿದರು. ಅವರಲ್ಲೊಬ್ಬರಂತೂ ಸರ್ಕಾರದ ಪ್ರಸ್ತಾಪಗಳನ್ನು, ಯುದ್ಧದಲ್ಲಿ ಭಾಗವಹಿಸುವುದನ್ನು ವಿರೋಧಿಸುತ್ತಾ, ಜರ್ಮನಿಯ ಕಾರ್ಮಿಕರು ಮತ್ತು ಸೈನಿಕರು ತಮ್ಮ ಬಂದೂಕುಗಳನ್ನು ಸರ್ಕಾರದತ್ತ ತಿರುಗಿಸಬೇಕೆಂದು ಪಾರ್ಲಿಮೆಂಟಿನ ವೇದಿಕೆಯಿಂದಲೇ ಘೋಷಿಸಿ ಎಲ್ಲರನ್ನು ದಂಗು ಬಡಿಸಿದರು. ಅಷ್ಟು ಮಾತ್ರವಲ್ಲ ಈ ಯುದ್ಧ ಜನಸಾಮಾನ್ಯರಿಗೆ ಸಂಬಂಧಿಸಿದ್ದಲ್ಲ, ಸಾಮ್ರಾಜ್ಯಶಾಹಿಗಳ ನಡುವೆ ವಸಾಹತುಗಳ ಹಂಚಿಕೆಯ ಬಗ್ಗೆ ಯುದ್ಧ. ಯುದ್ಧದಿಂದ ತೀವ್ರ ನಷ್ಟಕ್ಕೊಳಗಾದವರು ದುಡಿಯುವ ಜನ. ಇಂತಹ ಯುದ್ಧವನ್ನು ಎಲ್ಲಾ ದೇಶದ ಕಾರ್ಮಿಕರು ಮತ್ತು ಸೈನಿಕರು, ವಿರೋಧಿಸಬೇಕು. ಪಾರ್ಲಿಮೆಂಟಿನಲ್ಲಿ ಈ ರೀತಿ ಕರೆಕೊಟ್ಟ ನಂತರ, ಇವರು ತಮ್ಮ ಸಹವರ್ತಿಗಳೊಂದಿಗೆ ಬರ್ಲಿನ್ ನಗರದ ಸಾರ್ವಜನಿಕ ಚೌಕವಾದ ಪೋಟ್ಸ್‌ಡಾಮರ್ ಪ್ಲಾಟ್ಜ್‌ನಲ್ಲಿ ಯುದ್ಧದ ವಿರುದ್ಧ ಕರೆಯಲಾಗಿದ್ದ ರ್‍ಯಾಲಿಯಲ್ಲಿ ಮಾತನಾಡಲು ತೆರಳಿದರು. ಯಾರೀತ?

ಈತ ಮತ್ಯಾರಲ್ಲ. ಜರ್ಮನಿಯ ಕಮ್ಯುನಿಸ್ಟ್ ಚಳುವಳಿಯ ಅವಿಸ್ಮರಣೀಯ ನಾಯಕ ಕಾರ್ಲ್ ಲೈಬ್‌ನೆಕ್ತ್. ಜರ್ಮನ್ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷದ ಕ್ರಾಂತಿಕಾರಿ ವಿಭಾಗದ ನಾಯಕರಲ್ಲೊಬ್ಬರಾಗಿದ್ದು, ಆಮೇಲೆ ಜರ್ಮನ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ನಾಯಕರಲ್ಲಿ ಪ್ರಮುಖ. ಕಾರ್ಲ್ ಲೈಬ್‌ನೆಕ್ತ್‌ನ ತಂದೆ ಸಹ ಪ್ರಖ್ಯಾತ ಸೋಶಲಿಸ್ಟ್ ನಾಯಕರು. ಮಾರ್ಕ್ಸ್ ಮತ್ತು ಎಂಗೆಲ್ಸರ ಶಿಷ್ಯರಾಗಿದ್ದು, ಜರ್ಮನ್ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷದ ಸ್ಥಾಪಕ ನಾಯಕರಲ್ಲೊಬ್ಬರಾಗಿದ್ದು, ಆದರ ಮಾರ್ಕ್ಸ್‌ವಾದಿ ಗುಂಪಿನ ನಾಯಕರಾಗಿದ್ದರು. ವಿಲ್‌ಹೆಲ್ಮ್ ಲೈಬ್‌ನೆಕ್ತ್. ಆ ಅವಧಿಯಲ್ಲಿ ಜರ್ಮನ್ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷ ಆ ದೇಶದ ಕಾರ್ಮಿಕ ವರ್ಗದಲ್ಲಿ ಭದ್ರ ನೆಲೆ ಹೊಂದಿದ್ದು, ಯುರೋಪಿನಲ್ಲೇ ಅತ್ಯಂತ ಪ್ರಬಲ ಪಕ್ಷವಾಗಿತ್ತು. ಆ ಪಕ್ಷದ ಪ್ರಚಾರ, ಜನಬೆಂಬಲಕ್ಕೆ ಒಂದೇ ಉದಾಹರಣೆ ಸಾಕು-ಮೊದಲ ಮಹಾಯುದ್ಧ ಆರಂಭವಾಗುವ ಹೊತ್ತಿಗೆ ಪಕ್ಷ ದೇಶದಲ್ಲಿ 86 ದೈನಿಕ ಪತ್ರಿಕೆಗಳನ್ನು ನಡೆಸುತ್ತಿತ್ತು!

ಆದರೂ 1914 ರಲ್ಲಿ ಯುದ್ಧ ಆರಂಭವಾದಾಗ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷದ ನಾಯಕತ್ವ ಸಾಮ್ರಾಜ್ಯಶಾಹಿ ಯುದ್ಧದ ವಿರುದ್ಧ ದೃಢ ನಿಲುವು ತೆಗೆದುಕೊಳ್ಳದೆ ಸಂದರ್ಭ ಸಾಧಕತನ ಪ್ರದರ್ಶಿಸಿತು. ಆಗ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷದಲ್ಲಿದ್ದ ಕಾರ್ಲ್ ಲೈಬೆನೆಕ್ತ್, ಫ್ರಾನ್ಸ್ ಮೇಹ್ರಿಂಗ್, ರೋಸಾ ಲಕ್ಸಂಬರ್ಗ್ ಮುಂತಾದವರ ನಾಯಕತ್ವದ ಗುಂಪು ಇದನ್ನು ವಿರೋಧಿಸಿತ್ತು. ಸಾಮ್ರಾಜ್ಯಶಾಹಿ ಯುದ್ಧಕೋರತನವನ್ನು ಬಲವಾಗಿ ವಿರೋಧಿಸಬೇಕು ಮಾತ್ರವಲ್ಲ, ರಶ್ಯಾದಲ್ಲಿ ಲೆನಿನ್ ವಾದಿಸಿರುವಂತೆ ಸಂದರ್ಭ ಉಪಯೋಗಿಸಿ ಬೂರ್ಜ್ವಾ ವ್ಯವಸ್ಥೆ ಕಿತ್ತೊಗೆಯಲು ಕ್ರಾಂತಿ ಆರಂಭಿಸಬೇಕು ಎಂದು ವಾದಿಸುತ್ತಿದ್ದರು. ಈ ಹಿನ್ನೆಲೆಯಲ್ಲೇ ಅವರು ಪಾರ್ಲಿಮೆಂಟಿನಲ್ಲಿ ಆ ಧೈರ್ಯದ ನಿಲುವು ತೆಗೆದುಕೊಂಡಿದ್ದು. ಎಲ್ಲಾ ದೇಶಗಳ ಬೂರ್ಜ್ವಾ ವರ್ಗಗಳಂತೆ ಜರ್ಮನ್ ಬೂರ್ಜ್ವಾ ವರ್ಗ ಸಹ ಯುದ್ಧದ ಬಗ್ಗೆ ಬೆಂಬಲ ಗಳಿಸಲು, ದೇಶದ ತುಂಬಾ ಅಂಧ ದೇಶಾಭಿಮಾನದ ಹೊಳೆ ಹರಿಸಿತ್ತು. ಇದರಿಂದ ಜನಾಭಿಪ್ರಾಯ ರೂಪಿಸಲು ಯತ್ನಿಸುತ್ತಿತ್ತು. ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷದ ಬಹು ಪಾಲು ನಾಯಕತ್ವ ಈ ಹೊಳೆಯಲ್ಲಿ ಕೊಚ್ಚಿ ಹೋಗಿತ್ತು. ಯುದ್ಧ ವಿರೋಧಿ ನಿಲುವು ಜನಪ್ರಿಯವಲ್ಲ ಮಾತ್ರವಲ್ಲ ಬಂಧನಕ್ಕೆ ಆಹ್ವಾನವಾಗಿತ್ತು. ಇಂತಹ ಸನ್ನಿವೇಶದಲ್ಲಿ ಲೈಬ್‌ನೆಕ್ತರ ಜನಪ್ರಿಯವಲ್ಲದಿದ್ದರೂ, ನೀತಿ ಬದ್ಧ ನಿಲುವು ಚಾರಿತ್ರಿಕವಾಗಿತ್ತು. ರಶ್ಯದಲ್ಲಿ ಲೆನಿನ್ ತತ್‌ಕ್ಷಣ ಈ ನಿಲುವನ್ನು ಸ್ವಾಗತಿಸಿ, ಜರ್ಮನಿಯಲ್ಲೂ ಕ್ರಾಂತಿಕಾರಿ ಸಾಧ್ಯತೆ ಬಗ್ಗೆ ಬರೆದಿದ್ದರು, ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷದ ಬಹುಮತದ ನಾಯಕತ್ವದ ಯುದ್ಧ-ಪರ ನಿಲುವನ್ನು ತೀವ್ರವಾಗಿ ಖಂಡಿಸಿದ್ದರು.

ಕಾರ್ಲ್ ಲೈಬ್‌ನೆಕ್ತ್ ಹಿಂದಿನಿಂದಲೂ ನೀತಿಬದ್ಧ ನಿಲುವು ತೆಗೆದು ಕೊಂಡು ಅಪಾಯ ಎದುರಿಸುತ್ತಿದ್ದರು. 1907 ರಲ್ಲಿ "ಮಿಲಿಟರಿ ವಾದ ಮತ್ತು ಮಿಲಿಟಾರ್‌ವಾದ ವಿರೋಧ" ಎಂಬ ಅವರ ಪುಸ್ತಕ ಪ್ರಕಟವಾದಾಗ ಅವರನ್ನು ದೇಶದ್ರೋಹದ ಆಪಾದನೆ ಮೇಲೆ ಜೈಲಿಗೆ ಹಾಕಲಾಗಿತ್ತು. 1912 ರಲ್ಲಿ ಅವರು ಜರ್ಮನ್ ಪಾರ್ಲಿಮೆಂಟಿಗೆ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷದ ಪ್ರತಿನಿಧಿಯಾಗಿ ಆಯ್ಕೆಯಾದರೂ, ಯುದ್ಧದ ಕಾರ್ಮೋಡಗಳು ಕವಿಯಲಾರಂಭಿಸಿದಂತೆ ಅವರ ಪಕ್ಷದಲ್ಲಿ ಆ ಬಗ್ಗೆ ಎರಡು ಸ್ಪಷ್ಟ ನಿಲುವುಗಳು (ಒಂದು ಯುದ್ಧ ಪರ ಇನ್ನೊಂದು ಯುದ್ಧ ವಿರೋಧಿ) ಮೂಡಲಾರಂಭಿಸಿದ್ದವು. ಈ ಚರ್ಚೆಯ ಭಾಗವಾಗಿ ಅವರು ಬರೆದ 'ಮುಖ್ಯ ಶತ್ರು ದೇಶದೊಳಗೆ ಇದ್ದಾನೆ' ಎಂಬ ಪುಸ್ತಿಕೆ ದೇಶದಲ್ಲಿ, ಕಾರ್ಮಿಕ ವರ್ಗದಲ್ಲಿ ಯುದ್ಧ-ವಿರೋಧಿ ಕ್ರಾಂತಿ-ಪರ ಧೋರಣೆ ರೂಪಿಸಲು ನೆರವಾಗಿತ್ತು. ಆದರೆ ಅವರ ಪಕ್ಷದ ಬಹುಮತ ನಾಯಕತ್ವ ಹಾಗೂ ಸರಕಾರದ ಕೆಂಗಣ್ಣಿಗೂ ಗುರಿಯಾಗಿತ್ತು.

ಅವರನ್ನು ಪಾರ್ಲಿಮೆಂಟಿನ ಯುದ್ಧ-ವಿರೋಧಿ ಭಾಷಣದ ನಂತರ ಬಂಧಿಸಿ ಕಠಿಣ ಶ್ರಮದ ಶಿಕ್ಷೆಗೆ ಗುರಿಪಡಿಸಲಾಯಿತು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ. ಯುದ್ಧ ಮುಗಿದ ನಂತರ 1918ರಲ್ಲಿ ಬಿಡುಗಡೆಯಾಗಿ ಬಂದ ಕಾರ್ಲ್ ವಿಲ್‌ಹೆಲ್ಮ್ ಪೀಕ್ ಮತ್ತು ರೋಸಾ ಲಕ್ಸಂಬರ್ಗ್ ಜತೆ ಸೇರಿ ಸ್ಪಾರ್ಟಕಸ್ ಗುಂಪಿನ ನಾಯಕತ್ವ ವಹಿಸಿದರು. ಸ್ಪಾರ್ಟಕಸ್ ಯುದ್ಧದ ಮೊದಲು ಮತ್ತು ಯುದ್ಧದ ಸಮಯದಲ್ಲಿ ಕ್ರಾಂತಿಕಾರಿ ರಾಜಕೀಯ ಗುಂಪಾಗಿ ಕೆಲಸ ಮಾಡುತ್ತಿತ್ತು. ಡಿಸೆಂಬರ್ 1918 ರಲ್ಲಿ ಈ ಸ್ಪಾರ್ಟಕಸ್ ಗುಂಪು ಜರ್ಮನ್ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆ ಮಾಡಿತು. ಅದೇ ಸಮಯದಲ್ಲಿ ಅಂದರೆ ನವಂಬರ್‌ನಲ್ಲಿ ಜರ್ಮನ್ ರಾಜಸತ್ತೆ ಬಿದ್ದು ಹೋಯಿತು. ಆಗ ಹೊಸದಾಗಿ ಆರಂಭಿಸಿದ ಜರ್ಮನ್ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಭಾರಿ ಕಾರ್ಮಿಕ, ಸೈನಿಕರ ದಂಗೆ ಆರಂಭವಾಯಿತು. ರಶ್ಯದ ಪೆಟ್ರೊಗ್ರಾಡ್ ನಂತೆ ಬರ್ಲಿನ್‌ನಲ್ಲಿ ಕಾರ್ಮಿಕರ ಮತ್ತು ಸೈನ್ಯದ ಸಮಿತಿ (ರಶ್ಯಾದ ಸೋವಿಯೆತ್‌ಗಳಂತೆ) ಆರಂಭವಾದವು. ಈ ಸಮಿತಿಗಳು ರಾಜಸತ್ತೆ ಬಿದ್ದು ಹೋಗಿ ಉಂಟಾದ ಅರಾಜಕ ಸ್ಥಿತಿಯಲ್ಲಿ ರಶ್ಯಾದಂತೆ ಸಶಸ್ತ್ರ ಕ್ರಾಂತಿಗೆ ಮುಂದಾದವು. ಜರ್ಮನ್ ಎರಡನೇ ಸಮಾಜವಾದಿ ಪ್ರಭುತ್ವ ಸಾಧಿಸುವ ಹೊಸ್ತಿಲಲ್ಲಿ ಇತ್ತು. ಕಾರ್ಲ್ ನಾಯಕತ್ವದಲ್ಲಿ ಜರ್ಮನ್ ಕಮ್ಯುನಿಸ್ಟ್ ಪಕ್ಷ ಇದರ ಮುಂಚೂಣಿಯಲ್ಲಿತ್ತು. ಆದರೆ ಬೂರ್ಜ್ವ ಆಳುವವರ್ಗದ ಸಶಸ್ತ್ರ ಬಲವಾದದ ಪ್ರತಿರೋಧದ ಎದುರಲ್ಲಿ ಈ ಕ್ರಾಂತಿಕಾರಿ ಚಟುವಟಿಕೆ ಮುಂದುವರೆಯಲು ಸಾಧ್ಯವಾಗಲಿಲ್ಲ. ಜರ್ಮನ್ ಕಮ್ಯುನಿಸ್ಟ್ ನಾಯಕರ ನರಬೇಟೆ ಆರಂಭವಾಯಿತು. ವೈಯಕ್ತಿಕ ಭದ್ರತೆಗಾಗಿ ಕಾರ್ಲ್ ಮತ್ತು ರೋಸಾ ತಲೆತಪ್ಪಿಸಿ ಬರ್ಲಿನ್‌ನಿಂದ ಹೋಗಬಹುದಾಗಿತ್ತು. ಆದರೆ ಅವರು ಕೊನೆಗಳಿಗೆವರೆಗೆ ಕಾರ್ಮಿಕರ ಮತ್ತು ಸೈನಿಕರ ದಂಗೆಯ ನಾಯಕತ್ವವಹಿಸಿದರು. ಇಬ್ಬರನ್ನೂ ಬರ್ಲಿನ್ ಬೀದಿಯಲ್ಲಿ ಪೋಲಿಸರು ಬೇಟೆಯಾಡಿ ಕೊಂದರು.

ಕಾರ್ಲ್ ಲೈಬೆನೆಕ್ತ್ ಜರ್ಮನ್ ಕಮ್ಯುನಿಸ್ಟ್ ಪಕ್ಷದ ಅದ್ವಿತೀಯ ನಾಯಕ. 80 ವರ್ಷಗಳ ನಂತರವೂ ಅವರು ಈಗಲೂ ಜರ್ಮನ್ ಹಾಗೂ ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಸ್ಮರಣೀಯ ನಾಯಕ. ಈ ವರ್ಷ ಜನವರಿ 15 ರಂದು ಅವರ ಹುತಾತ್ಮದಿನದಂದು ನಡೆದ ರ್‍ಯಾಲಿಯಲ್ಲಿ ಒಂದು ಲಕ್ಷ ಜನ ಭಾಗವಹಿಸಿದ್ದರು ಎಂಬುದೇ ಅವರ ಚಾರಿತ್ರಿಕ ಕೊಡುಗೆಗೆ ಸಾಕ್ಷಿ. ಸಮಾಜವಾದ ಹಿನ್ನಡೆಯಲ್ಲಿರುವ ಅವಧಿಯಲ್ಲಿ ಯುರೋಪಿನ ಅತ್ಯಂತ ಅಭಿವೃದ್ಧ ಬಲವಾದ ಬೂರ್ಜ್ವಾ ದೇಶವಾದ ಜರ್ಮನಿಯ ರಾಜಧಾನಿಯಲ್ಲಿ ಇದು ನಡೆದದ್ದು ಎಂದು ನೆನಪಿಸಿಕೊಂಡರೆ ಕಾರ್ಲ್ ಲೈಬ್‌ನೆಕ್ತರ ಚಾರಿತ್ರಿಕ ವ್ಯಕ್ತಿತ್ವ ಅರ್ಥವಾಗುತ್ತದೆ.

ಧಣಿಗಳ ಬೆದರಿಕೆ



ಜಿ.ಎಸ್.ಮಣಿ

ಭಾರತದಲ್ಲಿ ಸದ್ಯದಲ್ಲಿರುವ ಆರ್ಥಿಕ ಹಿಂಜರಿತದ ಸ್ಥಿತಿಯಲ್ಲಿ ಹಲವು ಉದ್ದಿಮೆಗಳು ಇತರ ಆರ್ಥಿಕ ಚಟುವಟಿಕೆಗಳು ನಿಧಾನವಾಗಿವೆ. ಆದ್ದರಿಂದ ಬ್ಯಾಂಕುಗಳ ಸಾಲಗಳು ಬರಡು ಸಾಲಗಳಾಗುತ್ತಿರುವುದರಿಂದ (ಅಂದರೆ ಬಡ್ಡಿ ಕಂತುಗಳು ಮರುಪಾವತಿ ಯಾಗದೇ ಇರುವುದರಿಂದ) ಆಸ್ತಿ ವರ್ಗೀಕರಣ ನಿಯಮಗಳಲ್ಲಿ ಸ್ವಲ್ಪ ಸಡಿಲಗೊಳಿಸುವ ವಿಚಾರವನ್ನು ಸರ್ಕಾರ ಹೊರಗೆಡಹಿತ್ತು. ಇಂತಹ ಸಡಿಲಿಕೆ ಈಗ ತೊಂದರೆಯಲ್ಲಿರುವ ಉದ್ದಿಮೆಗಳು ಕೃಷಿಕರಿಗೆ ಎಲ್ಲರಿಗೆ ಅವಶ್ಯವೂ ಹೌದು .

ಆದರೆ ಬ್ಯಾಂಕ್ ಫಂಡ್‌ಗಳೆಂಬ ಕರಟಕ-ದಮನಕಗಳು ಇದಕ್ಕೆ ತೀವ್ರ ಆಕ್ಷೇಪ ಎತ್ತಿವೆ. ಈ ಎರಡೂ ಸಂಸ್ಥೆಗಳು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಈ ವಿಷಯದಲ್ಲಿ ನಿಯಮಗಳನ್ನು ಸಡಿಲಿಸುವ ಬದಲು ಇನ್ನೂ ಅವುಗಳನ್ನು ಬಿಗಿಗೊಳಿಸಬೇಕೆಂದು ಹೇಳುತ್ತಿವೆ.

ಹೀಗೆ ಮಾಡಿದರೆ ಅಂತ ರ್‍ರಾಷ್ಟ್ರೀಯವಾಗಿ ಹೋಲಿಸಿದರೆ ಭಾರತೀಯ ಬ್ಯಾಂಕುಗಳ ಆರೋಗ್ಯ ಸ್ಥಿತಿ ಹೇಗಿದೆ ಎಂಬುದರ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ ಎಂಬುದು ಅವುಗಳ ಅಭಿಪ್ರಾಯ. ಏಶಿಯಾಂತು ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಇಂತಹ ಕ್ರಮ ಬರಲಿರುವ ಆರ್ಥಿಕ ಹಿನ್ನಡೆ, ಪರಿಸ್ಥಿತಿಗಳ ಸೂಚಿಯಾಗಿರುತ್ತದೆ. ಎಂಬುದು ಈ ಧಣಿಗಳ ದೂರಾಲೋಚನೆ.

ಇದಲ್ಲದೆ ಈಗಾಗಲೇ ಸ್ಟಾಂಡರ್ಡ್ ಆ್ಯಂಡ್ ಪೂರ್ ಮತ್ತು ಮೂಡಿಸ್ ಎಂಬ ರೇಟಿಂಗ್ ಕಂಪನಿಗಳು ಭಾರತದ ಬಗೆಗೆ ಕಡಿಮೆ ರೇಟಿಂಗ್ ನೀಡಿರುವುದರಿಂದ ಒಟ್ಟಾರೆ ಭಾರತದ ಬಗೆಗಿನ ಅಭಿಪ್ರಾಯವೇ ಕೆಟ್ಟದ್ದಿರುತ್ತದೆ. ಅದಕ್ಕನುಗುಣವಾಗಿ ಬ್ಯಾಂಕುಗಳು ಆಸ್ತಿ ವರ್ಗೀಕರಣ ಮಾಡಬೇಕೆಂಬ ಒತ್ತಡ ಈ ಸಂಸ್ಥೆಗಳದ್ದು.

ಭಾರತೀಯ ರಿಸರ್ವ್ ಬ್ಯಾಂಕಿನ 1997-98 ನೇ ಸಾಲಿನ ವರದಿಯ ಪ್ರಕಾರ ಬ್ಯಾಂಕುಗಳ ಬರಡು ಸಾಲಗಳ ಮೊತ್ತ ಸುಮಾರು 40000 ಕೋಟಿ ರೂಪಾಯಿಗಳು.

ಇದು ಬ್ಯಾಂಕುಗಳ ಆರೋಗ್ಯದ ಪರಿಸ್ಥಿತಿ ಹದಗೆಟ್ಟಿರುವುದರಿಂದ ಈ ಒಟ್ಟು ಸಾಲದಲ್ಲಿ ಬರಡು ಸಾಲಗಳ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳುವ ಒಂದು ಪ್ರಯತ್ನವಾಗಿ ಬ್ಯಾಂಕುಗಳು ಹೆಚ್ಚಿಗೆ ಸಾಲ ನೀಡುವ ಪ್ರಯತ್ನಗಳನ್ನು ಮಾಡತೊಡಗಿವೆ.

ಆರ್ಥಿಕ ಹಿಂಜರಿತವಿರುವಾಗ ಸಾಲಗಳಿಗೆ ಹೆಚ್ಚಿನ ಬೇಡಿಕೆ ಇರುವುದಿಲ್ಲ. ಹೀಗಿರುವಾಗ ಹೆಚ್ಚಿನ ಸಾಲ ನೀಡಲೇ ಬೇಕೆಂದು ಹೊರಟರೆ ಅವು ಬರಡು ಸಾಲಗಳಾಗುವ ಸಾಧ್ಯತೆ ಹೆಚ್ಚಾಗುತ್ತದೆ.

ಹೀಗೆ ಐ.ಎಂ.ಎಫ್ ಮತ್ತು ವಿಶ್ವ ಬ್ಯಾಂಕುಗಳ ಒಂದೊಂದು ಷರತ್ತಿಗೆ ಮಣಿಯುತ್ತ ಹೋದರೂ ಅದು ನಮ್ಮ ಇಡೀ ಆರ್ಥಿಕವನ್ನು ಒಂದು ವಿಷ ವರ್ತುಲದೊಳಕ್ಕೆ ಸೆಳೆದೊಯ್ದುಬಿಡುತ್ತದೆ. ಬಂಡವಾಳಶಾಹಿ ಬಿಕ್ಕಟ್ಟಿನ ಲಕ್ಷಣ ಇದು. ಬಿಕ್ಕಟ್ಟಿನಿಂದ ಪರಿಹಾರದತ್ತ ಹೋಗುವ ಬದಲು ಬಿಕ್ಕಟ್ಟಿನಿಂದ ಹೆಚ್ಚಿನ ಬಿಕ್ಕಟ್ಟಿಗೇ ಹೋಗುವುದೇ ಈ ಲಕ್ಷಣ.

ಆರ್ಥಿಕ ಹಾಗೆಂದರೇನು?

ಬಿಜೆಪಿಯ ಕೇಂದ್ರ ಹಣಕಾಸು ಮಂತ್ರಿ ಯಶವಂತ ಸಿನ್ಹಾ ಅವರು ಆಯವ್ಯಯ ಮಂಡಿಸಿದಾಗಲೇ ಈ ಸರ್ಕಾರಕ್ಕೆ ದಿಕ್ಕು ದಿಸೆಗಳಿಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗತೊಡಗಿತ್ತು. ತನ್ನದೇ ಹಲವು ಪ್ರಸ್ತಾಪಗಳನ್ನು ಮಂತ್ರಿ ಮಹಾಶಯರು ಹಿಂತೆಗೆದುಕೊಳ್ಳುವಂತಾದದ್ದು ಅವರ ಬಜೆಟಿಗೆ ಯಾವುದೇ ಆರ್ಥಿಕ ಅಜೆಂಡಾ ಇಲ್ಲ. ಇದರ ಪರಿಣಾಮಗಳನ್ನು ನಾವು ಇಂದಿನ ಆರ್ಥಿಕ ಹಿಂಜರಿತದಲ್ಲಿ ಕಾಣುತ್ತಿದ್ದೇವೆ. ಇದು ಹೀಗೇ ಮುಂದುವರಿದರೆ ನಾವು ಹಿಂದಿನ "ಹಿಂದೂ ಬೆಳವಣಿಗೆ ದರವನ್ನು ಕಾಣುತ್ತೇವೇನೊ."

- ಬಿಸಿನೆಸ್ ವರ್ಲ್ಡ್ ಪಾಕ್ಷಿಕದಲ್ಲಿ ಸುರೇಶ್‌ಕುಮಾರ್ ಎಂಬ ಓದುಗರ ಪತ್ರ.

ಎಂತಹ ಮುಕ್ತ ವ್ಯಾಪಾರ?

ಔದ್ಯಮಿಕೃತ ದೇಶಗಳು ಅಭಿವೃದ್ಧಿಶೀಲ ದೇಶಗಳ ವ್ಯಾಪಾರ ವಹಿವಾಟುಗಳಿಗೆ ಒಡ್ಡುತ್ತಿರುವ ಅಡೆತಡೆಗಳನ್ನು ಗಮನಿಸಿದರೆ ವಿಶ್ವ ವ್ಯಾಪಾರ ಸಂಸ್ಥೆ ಈ ಅಡೆತಡೆಗಳನ್ನು ನಿವಾರಿಸುವಲ್ಲಿ ಎಂತಹ ಕಾರ್ಯ ಮಾಡುತ್ತಿದೆ ಎಂಬುದು ಅರ್ಥವಾಗುವುದಿಲ್ಲ.

- ಬಿಸಿನೆಸ್ ವರ್ಲ್ಡ್ ಪಾಕ್ಷಿಕದಲ್ಲಿ ಪಿ. ಶಿವಕುಮಾರ ಎಂಬ ಓದುಗರ ಪತ್ರ

"ಆಸ್ತಿ ಪುನಃಶ್ಚೇತನ ನಿಧಿ"

ಇದು ಹೊಸ ಹೆಸರಿನಂತೆ ಕೇಳಿಸಬಹುದು. ಹಣಕಾಸು ವಲಯದ ಸುಧಾರಣೆಗಾಗಿ ನರಸಿಂಹಂ ಅವರ ನೇತೃತ್ವದಲ್ಲಿ ನೇಮಿತವಾದ ಸಮಿತಿ ಇಂತಹ ಒಂದು ನಿಧಿಸ್ಥಾಪಿಸುವ ಶಿಫಾರಸ್ಸು ಮಾಡಿತ್ತು.

ಬ್ಯಾಂಕುಗಳ ಬರಡು ಸಾಲಗಳನ್ನೆಲ್ಲಾ ಈ ನಿಧಿ ಕೊಂಡುಕೊಂಡು ಈ ಸಾಲಗಳ ವ್ಯಾಪಾರವನ್ನು ಮಾಡುವ ಪ್ರಸ್ತಾಪ ಇದು. ಇಂತಹ ನಿಧಿ ಸ್ಥಾಪಿಸಿದರೆ ಬ್ಯಾಂಕುಗಳ ಬರಡು ಸಾಲಗಳನ್ನು ಕಡಿಮೆ ಮಾಡಬಹುದು ಎಂಬ ವಿಚಾರ ಈ ಶಿಫಾರಸ್ಸಿನಲ್ಲಡಗಿದೆ. ಆದರೆ ಇಂತಹ ನಿಧಿಸ್ಥಾಪನೆ ಸುಲಭವೂ ಅಲ್ಲ. ಎಣಿಸಿದಷ್ಟು ಉಪಯುಕ್ತವೂ ಆಗಿರಲು ಸಾಧ್ಯವಿಲ್ಲ ಬಂಡವಾಳಿಗರು ತಮ್ಮ ಸಾಲಗಳನ್ನು ಬರಡು ಸಾಲಗಳನ್ನಾಗಿ ಮಾಡಿ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಹಾಕಿದ ಟೋಪಿಯನ್ನು ಅಧಿಕೃತಗೊಳಿಸುವ ನಿಧಿಯಾಗುತ್ತದೆ ಇದು ಅಷ್ಟೆ. ದೊಡ್ಡ ಬಂಡವಾಳಿಗರ ಸಾಲಗಳನ್ನು ಮುಲಾಜಿಲ್ಲದೆ ವಸೂಲಿ ಮಾಡಿ ಬ್ಯಾಂಕುಗಳ ಆರೋಗ್ಯ ಸುಧಾರಿಸುವ ಮಾರ್ಗವಿರುವಾಗ ಅದನ್ನು ಮಾಡುವ ಸಂಕಲ್ಪ ಉದ್ದೇಶಗಳೆರಡೂ ಸರ್ಕಾರಕ್ಕಿಲ್ಲ.

ಆದ್ದರಿಂದಲೇ ಮತ್ತೆ ಮತ್ತೆ ಇಂತಹ ನಿಧಿ ಸ್ಥಾಪಿಸಲು ಮಾತನ್ನು ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಆಡುತ್ತಿವೆ.

ಬೇಜ್ ಬರೂವಾ ಪ್ರಕರಣ

ಆಮದು ಸುಂಕ ನಿಯಮಗಳನ್ನು ಮುರಿದವರನ್ನು ವಿಚಾರಣೆಗೊಳಪಡಿಸಿ ಶಿಕ್ಷಿಸಲು ಎನ್‌ಫೋರ್ಸ್‌ಮೆಂಟ್ ಡೈರೆಕ್ಟೊರೇಟ್ ಎಂಬ ಕೇಂದ್ರ ಸರ್ಕಾರದ ಸಂಸ್ಥೆಯೊಂದಿದೆ. ಇದರ ನಿರ್ದೇಶಕ ಶ್ರೀ ಬೇಜ್ ಬರೂವಾ, ಇವರು ಬಹಳ ಸೂಕ್ಷ್ಮ ಮತ್ತು ಘನ ವ್ಯಕ್ತಿಗಳ ಪ್ರಕರಣಗಳ ವಿಚಾರಣೆ ನಡೆಸುತ್ತಿದ್ದರು.

ಕೇಂದ್ರದ ಬಿಜೆಪಿ ಸರ್ಕಾರ ಇಂತಹ ವಿಚಾರಣೆಗಳು ತ್ವರಿತವಾಗಿ ನಡೆದು ಅಪರಾಧಿಗಳಿಗೆ ಶಿಕ್ಷೆ ದೊರೆಯುವಂತೆ ಮಾಡುವ ಕೆಲಸ ಮಾಡಬೇಕಾಗಿತ್ತು. ಬದಲಿಗೆ ಅದು ಆಂತರಿಕ ಒತ್ತಡಗಳಿಗೆ ಮಣಿದು ಶ್ರೀ ಬೇಜ್‌ಬರೂವಾ ಅವರನ್ನು ವರ್ಗಾವಣೆ ಮಾಡಿತ್ತು. ಇದರ ಅರ್ಧ ವಿಚಾರಣೆ ತಡವಾಗಿ ಅಪರಾಧಿಗಳಿಗೆ ಶಿಕ್ಷೆ ದೊರೆಯದೇ ಹೋಗುವ ಸ್ಥಿತಿಯನ್ನು ಸರ್ಕಾರ ಉಂಟು ಮಾಡಿತು.

ಇದನ್ನು ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನಿಸಲಾಯಿತು. ದೊಡ್ಡ ರಾಜಕೀಯ ವಿವಾದವನ್ನು ಇದು ಸೃಷ್ಟಿಸಿತು.

ಸುಪ್ರೀಂ ಕೋರ್ಟಿನಲ್ಲಿ ಸರ್ಕಾರದ ಪರವಾಗಿ ತಪ್ಪು ದಾರಿಗೆಳೆವ ಅಫಿಡವಿಟನ್ನು ಸಲ್ಲಿಸಲಾಯಿತು. ಇದರಿಂದ ತೀವ್ರ ಸಂತಾಪಗೊಂಡ ಸುಪ್ರೀಂ ಕೋರ್ಟ್ ನ್ಯಾಯಾಧೀಶರುಗಳು ಸರ್ಕಾರಕ್ಕೆ ಈ ವಿಷಯದಲ್ಲಿ ಛೀಮಾರಿ ಹಾಕಿದರು. ಇಷ್ಟೆಲ್ಲ ಆದ ಮೇಲೆ ಮಾನ ಮುಚ್ಚಿಕೊಳ್ಳಲು ಬಿಜೆಪಿ ಸರ್ಕಾರ ತಪ್ಪು ಹಾದಿಗೆಳೆವ ಅಫಿಡವಿಟ್ ಬಗ್ಗೆ ವಿಚಾರಣೆ ಆಜ್ಞೆ ಮಾಡುವ ನಾಟಕವಾಡಿ ಬೇಜ್ ಬರೂವಾ ಅವರನ್ನು ಪುನಃ ಅವರ ಸ್ಥಾನಕ್ಕೆ ತಂದಿತು.

ಬಿಜೆಪಿ ಸರ್ಕಾರದ ಪ್ರಾಮಾಣಿಕತೆ ಮತ್ತು ಕಾಳಜಿಯನ್ನು ಅದಕ್ಕೆ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಇರುವ ಗೌರವಗಳನ್ನು ಎತ್ತಿ ತೋರುವ ಪ್ರಕರಣ ಇದು.

ಬಿಜೆಪಿ ಸರ್ಕಾರ ಭಾರತಕ್ಕೇನೂ ಒಳಿತು ಮಾಡಿಲ್ಲ

ಸುನ್ ಪಿಯುಬ್ಬನ್ ಎಂಬ ಚೀನೀ ಪ್ರಾಧ್ಯಾಪಕರು ಭಾರತದಲ್ಲಿ ಬಿಜೆಪಿ ಸರ್ಕಾರ ಏನು ಸಾಧಿಸಿದೆ ಎಂಬ ಬಗ್ಗೆ ಹೀಗೆ ಹೇಳಿದ್ದಾರೆ.

"ಕೆಲವು ಚೀನೀ ಬುದ್ಧಿಜೀವಿಗಳು ಭಾರತದ ಅಣ್ವಸ್ತ್ರ ಪರೀಕ್ಷೆ ಬಿಜೆಪಿಯ ರಾಜಕೀಯ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದುಕೊಂಡಿದ್ದರು. ಆದರೆ ಹಾಗಾಗಿಲ್ಲ.

ಇದರಿಂದಾಗಿ ವಿದೇಶೀ ನೇರ ಹೂಡಿಕೆ ಕಳೆದ ವರ್ಷದಲ್ಲಿ 3.2 ಶತಕೋಟಿ ಡಾಲರುಗಳಷ್ಟಿದ್ದದ್ದು ಈ ವರ್ಷ 2.2 ಶತಕೋಟಿ ಡಾಲರುಗಳಿಗೆ ಇಳಿದಿದೆ. ಇದು ಇನ್ನೂ ಕಡಿಮೆಯಾಗುವ ಸೂಚನೆಗಳಿವೆ.

ಹಿಂಜರಿತ ಇನ್ನೂ ಮುಂದುವರಿಯುತ್ತದೆ. ಬಿಜೆಪಿ ಸರ್ಕಾರ ಅದನ್ನು ಪರಿಹರಿಸಲಾರದು.

ಬಿಜೆಪಿ ಸರ್ಕಾರವೂ ಇದರಿಂದ ಬಲಗೊಂಡಿಲ್ಲ. ಬದಲಿಗೆ ರಾಜಕೀಯ ಬಿಕ್ಕಟ್ಟು ಇನ್ನೂ ತೀವ್ರವಾಗತೊಡಗಿದೆ.

ಸರ್ಕಾರ ಆರ್ಥಿಕ ವಿಷಯಗಳನ್ನು ಮುಖ್ಯ ವಿಷಯವೆಂದು ಪರಿಗಣಿಸಿಯೇ ಇಲ್ಲ. ಭಾರತದ ಆರ್ಥಿಕವನ್ನು ಪುನರುಜ್ಜೀವನಗೊಳಿಸುವುದು ಹೇಗೆಂಬ ಬಗೆಗಿನ ವಿಚಾರವನ್ನೇ ಇವರು ಬಿಟ್ಟು ಕೊಟ್ಟಂತಿದೆ."

ಬಿಜೆಪಿ ಸರ್ಕಾರದ ಬಗ್ಗೆ ಇದಕ್ಕಿಂತ ಬೇರೆ ವ್ಯಾಖ್ಯಾನ ಬೇಕೆ?

ಮಳೆಯಾದರೂ ಬೆಳೆ ಬಾರದು

ಇದು ಹೊಸ ಉದಾರೀಕರಣದ ಯುಗದಲ್ಲಿ ಮಾತ್ರವಾಗಬಹುದಾದದ್ದು. ಸಾಮಾನ್ಯವಾಗಿ ಉತ್ತಮ ಮಳೆ ಆದರೆ ಉತ್ತಮ ಬೆಳೆ ಆಗಬೇಕಾದದ್ದು ಸಹಜವಾದದ್ದು ಆದರೆ ಈ ಸಾಲಿನಲ್ಲಿ ಅದು ಆಗುವುದಿಲ್ಲ ಎಂದು ಸಿಎಂಐಇ ಹೇಳಿದೆ.

1996-97 ರ ಸಾಲಿನಲ್ಲಿ 199.32 ದಶಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ಯಾದದ್ದನ್ನು ಗಮನದಲ್ಲಿಟ್ಟುಕೊಂಡರೆ ಈ ಸಾಲಿನಲ್ಲಿ ಬರೀ 193.95 ದಶಲಕ್ಷ ಟನ್ನುಗಳಷ್ಟು ಮಾತ್ರ ಆಗುತ್ತದೆ ಎಂದರೆ ಇದು ಗಣನೀಯವಾಗಿ ಆಗುವ ಕುಸಿತ.

ಬೇಕಾದಷ್ಟು ಆಹಾರ ಉತ್ಪಾದನೆಯಾದರೂ ಬೂರ್ಜ್ವಾಗಳ ಸರ್ಕಾರ ಎಲ್ಲರಿಗೂ ಆಹಾರವನ್ನು ವಿತರಿಸಲಾರದು. ದೇಶದ ರೇಶನ್ ವ್ಯವಸ್ಥೆ ಹದಗೆಟ್ಟು ಹೋಗಿರುವಾಗ ಸರಿಯಾದ ವಿತರಣೆ ಅದರಲ್ಲೂ ಜನಸಾಮಾನ್ಯರಿಗೆ ಆಗಲಾರದು.

ಈಗ ಆಹಾರಧಾನ್ಯಗಳ ಉತ್ಪಾದನೆಯೇ ಕಡಿಮೆಯಾಗುತ್ತದೆ ಎಂದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಊಹಿಸಿಕೊಳ್ಳಬಹುದು.

ಒಟ್ಟಾರೆ ಕೃಷಿ ಉತ್ಪಾದನೆಯಲ್ಲೂ ಅಂತಹ ಹೆಚ್ಚಳವೇನೂ ಆಗಲಾರದು ಎಂದು ಸಿ.ಎಂ.ಐ.ಇ. ಸಂಸ್ಥೆ ಹೇಳಿದೆ. ಔದ್ಯಮಿಕ ಬೆಳವಣಿಗೆಯು ಸ್ಥಗಿತ ಗೊಂಡಿರುವಾಗ ಒಟ್ಟಾರೆ ಆರ್ಥಿಕದ ಪರಿಸ್ಥಿತಿ ಇನ್ನೂ ಹದಗೆಡುತ್ತದೆ ಎಂಬುದರಲ್ಲಿ ಸಂದೇಹವೇ ಇಲ್ಲ ಅಲ್ಲವೆ?

ಹೈದರಾಬಾದ್-ಕರ್ನಾಟಕ ವಿಲೀನ ದಿನಾಚರಣೆ

ಚರಿತ್ರೆಗೆ ಅಪಚಾರ ಬಗೆಯಲು ಬಿಡಬಾರದು

ಹೈದರಾಬಾದ್ - ಕರ್ನಾಟಕ ವಿಲೀನ ದಿನಾಚರಣೆಯನ್ನು ಸೆಪ್ಟೆಂಬರ್ 17 ರಂದು ಆಚರಿಸುತ್ತಿದ್ದು ರಾಜ್ಯ ಸರಕಾರವು ನೆರವು ನೀಡಿದೆ ಹಾಗೂ ಆ ದಿನ ಸರ್ಕಾರಿ ಕಚೇರಿಗಳಿಗೆ ರಜೆ ಘೋಷಿಸಿದೆ.

ನಿಜಾಮರ ಆಡಳಿತದ ವಿರುದ್ಧ ಜನಸಾಮಾನ್ಯರು ಹೋರಾಟ ನಡೆಸಿ ವಿಲೀನಗೊಂಡುದನ್ನು ನೆನಪಿಸುವ ಸಂದರ್ಭ ನಿಜಕ್ಕೂ ಸ್ವಾಗತಾರ್ಹ. ರಜಾಕಾರರನ್ನು ವಿರೋಧಿಸಿ ಮಟ್ಟ ಹಾಕಿರುವುದು ಆಂಧ್ರದ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಎನ್ನುವುದನ್ನು ಮರೆಯಬಾರದು. ಗ್ರಾಮಗಳಲ್ಲಿ ರೈತ ಸಂಘಟನೆಯನ್ನು ರಚಿಸಿ, ಭೂ ಮಾಲಿಕರ ವಿರುದ್ಧ ಹೋರಾಟ ನಡೆಸಿ, ಭೂಹೀನರಿಗೆ ಭೂಮಿಯನ್ನು ಹಂಚುತ್ತಾ ಒಂದೊಂದೇ ಗ್ರಾಮವನ್ನು ವಿಮೋಚನೆಗೊಳಿಸಿ ನಂತರ ದೇಶಾದ್ಯಂತ ಪ್ರಸಿದ್ಧಿಯಾದ 'ವೀರತೆಲಂಗಾಣ ಸಮರ' ವಾಗಿ ಪರಿವರ್ತನೆಯಾದುದು, ನಿಜಾಮರ ಆಡಳಿತ ಅಂತ್ಯಗೊಂಡದ್ದು ಚಾರಿತ್ರಿಕ ಸತ್ಯ.

ಆದರೆ ಅಂದಿನ ಗೃಹ ಸಚಿವರಾಗಿದ್ದ ಸರ್ದಾರ್ ಪಟೇಲರನ್ನು ಇಂದಿನ ಗೃಹ ಸಚಿವರಾದ ಎಲ್.ಕೆ.ಅಡ್ವಾಣಿಯವರಿಗೆ ಹೋಲಿಸುವುದು ರಜಾಕಾರರ ವಿರುದ್ಧ ನಡೆದ ಹೋರಾಟವನ್ನು ಒಂದು ಜನಾಂಗದ ವಿರುದ್ಧ ನಡೆದ ಹೋರಾಟವೆಂದು ಬಿಜೆಪಿ ಮುಖಂಡರು, ಕಾರ್ಯಕರ್ತರು ಪ್ರಚಾರ ನಡೆಸುವುದು - ಚರಿತ್ರೆಗೆ ಬಗೆದ ಅಪಚಾರವಾಗುತ್ತದೆ.

ಒಂದೆಡೆ ಹೈದರಬಾದ - ಕರ್ನಾಟಕ ರಾಜ್ಯದಿಂದ ಪ್ರತ್ಯೇಕಗೊಳ್ಳಬೇಕೆಂಬ ಕೂಗು, ಇನ್ನೊಂದೆಡೆ ಒಂದು ಜನಾಂಗವನ್ನು ಇನ್ನೊಂದು ಜನಾಂಗದ ವಿರುದ್ಧ ಎತ್ತಿ ಕಟ್ಟುವ ಸನ್ನಾಹ ದೇಶದ ಐಕ್ಯತೆಗೆ ಮಾರಕವಾಗಿದೆ. ಇಂತಹ ಪ್ರಯತ್ನಗಳು ಅತ್ಯಂತ ಖಂಡನೀಯ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಹೇಳಿದೆ. ಹಾಗೂ ಪ್ರಜಾಸತ್ತೆ ಮತ್ತು ಐಕ್ಯತೆಗಾಗಿ ಹೋರಾಡುವ ಎಲ್ಲಾ ಜಾತ್ಯಾತೀತ ಶಕ್ತಿಗಳು ಇದರ ವಿರುದ್ಧ ಪ್ರಚಾರ ನಡೆಸಬೇಕೆಂದು ಕರೆ ನೀಡಿದೆ.

ಬಾಗೂರು ನವಿಲೆ ಹೋರಾಟ

ಹಲವು ವರ್ಷಗಳ ಹಿಂದೆಯೇ ಬಾಗೂರು, ನವಿಲೆ ನೀರಾವರಿ ಸುರಂಗದ ರಚನೆಯಿಂದಾಗಿ ಜಲಾಶಯ ಬತ್ತಿದ ರೈತರಿಗೆ ಏತ ನೀರಾವರಿ ಒದಗಿಸಲಾಗುವುದು ಎಂದು ಆಶ್ವಾಸನೆ ನೀಡಿದ್ದರೂ ಅದನ್ನು ಈಡೇರಿಸಲಿಲ್ಲ. ಅದರಿಂದ ಫಲ ನಷ್ಟವಾದಾಗ 26 ಕೋಟಿ ರೂ. ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದರೂ ಜನರಿಗೆ ಪರಿಹಾರ ಸಿಗಲಿಲ್ಲ. ಬದಲಾಗಿ ಶಾಂತಿಯುತವಾಗಿ ಹೋರಾಟ ನಡೆಸುತ್ತಿದ್ದ ಮುಗ್ಧ ಜನತೆಯ ಮೇಲೆ ಪೋಲೀಸ್ ದೌರ್ಜನ ತೀವ್ರವಾಗಿದೆ. ಗೂಂಡಾದಾಳಿಗಳು ನಡೆಯುತ್ತಿರುವುದು ವರದಿಯಾಗಿದೆ. ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಇದನ್ನು ತೀವ್ರವಾಗಿ ಖಂಡಿಸುತ್ತಾ ಈ ಕೆಳಗಿನ ಒತ್ತಾಯಗಳನ್ನು ಸರ್ಕಾರದ ಮುಂದಿಟ್ಟಿದೆ.

1.ಕೂಡಲೇ ಏತ ನೀರಾವರಿ ಯೋಜನೆಯನ್ನು ಜಾರಿಗೊಳಿಸುವುದು ಹಾಗೂ 26 ಕೋಟಿ ರೂ. ಪರಿಹಾರ ಒದಗಿಸಬೇಕು.

2. ಪೋಲೀಸ್ ದಬ್ಬಾಳಿಕೆಯನ್ನು ನಿಲ್ಲಿಸುವುದು ಹಾಗೂ ದೌರ್ಜನ್ಯ ನಡೆಸಿದ ಪೋಲೀಸರ ವಿರುದ್ಧ ಗೂಂಡಾಗಳ ಮೇಲೆ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು.

3. ಬಂಧನದಲ್ಲಿರುವ ರೈತರನ್ನು ಹಾಗೂ ಮುಖಂಡರನ್ನು ಬಿಡುಗಡೆ ಮಾಡಬೇಕು.

ಅಂಗನವಾಡಿ ನೌಕರರ ಯಶಸ್ವಿ ರಾಜ್ಯ ಶಿಬಿರ

ಸೆ. 2 ರಿಂದ 5ರ ವರೆಗೆ ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ವತಿಯಿಂದ ರಾಜ್ಯ ಮಟ್ಟದ ಅಧ್ಯಯನ ಶಿಬಿರವು ಯಶಸ್ವಿಯಾಗಿ ಜರುಗಿತು.

12 ಜಿಲ್ಲೆಗಳಿಂದ 75 ಪ್ರತಿನಿಧಿಗಳು ಪಾಲ್ಗೊಂಡಿದ್ದ ಶಿಬಿರವನ್ನು ರಾಜ್ಯ ಸಿಐಟಿಯು ಮುಖಂಡರಾದ ಸೂರ್ಯನಾರಾಯಣರಾವ್ ಉದ್ಘಾಟಿಸಿದರು.

ಇಂದಿನ ಅತ್ಯಂತ ಬೆಲೆಯೇರಿಕೆಯ ಸನ್ನಿವೇಶದಲ್ಲೂ ಅಂಗನವಾಡಿ ನೌಕರರಿಗೆ ನಿಕೃಷ್ಟ ವೇತನ ನೀಡುತ್ತಿರುವ ಸರ್ಕಾರದ ಕ್ರಮವನ್ನು ಕಾಂ|| ಸೂರಿ ತಮ್ಮ ಉದ್ಘಾಟನಾ ಭಾಷಣದಲ್ಲಿ ಖಂಡಿಸಿದರು. ಅಂಗನವಾಡಿ ಕಾರ್ಯಕರ್ತೆಯರು ಒಂದು ಸಂಘಟನೆಯಡಿ ಐಕ್ಯ ಹೋರಾಟದ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕೆಂದರು.

ಮನುಷ್ಯನ ಕನಿಷ್ಟ ಅಗತ್ಯಗಳನ್ನು ಪೂರೈಸುವಂತಹ ವೇತನವನ್ನು ಸರ್ಕಾರ ನಿಗದಿ ಪಡಿಸಬೇಕೆಂದು ವಿಜೆಕೆ ನಾಯರ್ ಆಗ್ರಹಿಸಿದರು. ಅಂಗನವಾಡಿ ನೌಕರರಿಗೆ ಕೊಡುವ 200 ರಿಂದ 600 ರೂ ಗಳಲ್ಲಿ ಆಹಾರ, ವಸತಿ, ಬಟ್ಟೆ ಪಡೆಯಲು ಸಾಧ್ಯವೇ ಎಂದ ಅವರು ನೌಕರರು ಹೋರಾಟಕ್ಕೆ ಮುಂದಾಗ ಬೇಕೆಂದರು.

ವೇದಿಕೆಯಲ್ಲಿ ಸಂಘದ ರಾಜ್ಯ ಅಧ್ಯಕ್ಷರಾದ ಎನ್.ಪ್ರಭಾ, ಪ್ರಧಾನ ಕಾರ್ಯದರ್ಶಿ ವರಲಕ್ಷ್ಮಿ, ತಾಲೂಕು ಮುಖಂಡರಾದ ಪ್ರೇಮ್ ಕುಮಾರ್, ರಂಗಮಣಿ, ಕೆಂಪಮ್ಮ ಹಾಗೂ ಸ್ಥಳಿಯ ಜನ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಶಿಬಿರದ ಕೊನೆಯ ದಿನ ತುರುವೆಕೆರೆ ಹಾಗೂ ಗುಬ್ಬಿ ತಾ. ಸಮಿತಿಗಳು ಅಂಗನವಾಡಿ ನೌಕರರ ಮೆರವಣಿಗೆ ಸಂಘಟಿಸಿದ್ದವು. ನೂರಾರು ಕಾರ್ಯಕರ್ತೆಯರು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ನಂತರ ಬಹಿರಂಗ ಸಭೆ ನಡೆಸಲಾಯಿತು.

ಬಹಿರಂಗ ಸಭೆಯಲ್ಲಿ ಮಾತನಾಡಿದ ಅಂಗನವಾಡಿ ನೌಕರರ ಸಂಘದ ರಾಷ್ಟ್ರಮುಖಂಡರಾದ ಡಾ|| ಹೇಮಲತ ರಾಷ್ಟ್ರದ ವಿವಿದೆಡೆ ಪ್ರಬಲ ಹೋರಾಟಗಳ ಮೂಲಕ ಅಂ. ನೌಕರರು ಪಡೆದ ಅನುಕೂಲಗಳ ಬಗ್ಗೆ ವಿವರಿಸಿದರು. ಪ್ರಭಾ, ವರಲಕ್ಷ್ಮಿ, ಮುಜೀಬ್ ಹಾಗೂ ಸ್ಥಳೀಯ ಮುಖಂಡರು ಮಾತನಾಡಿದರು.

ವಿಜೆಕೆ ನಾಯರ್ ಪಿ. ರಾಮಚಂದ್ರರಾವ್, ಜಿ.ಎನ್ ನಾಗರಾಜ್ ಹಾಗೂ ಕಾಂ|| ಹೇಮಲತ ಭಾಗವಹಿಸಿ ಶಿಬಿರ ನಡೆಸಿ ಕೊಟ್ಟರು.

ಶಿಬಿರದಲ್ಲಿ ನೌಕರರ ಸಮಸ್ಯೆಗಳ ಕುರಿತು ಚರ್ಚಿಸಿ ಕೆಳಕಂಡ ಹೋರಾಟದ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

- ಆಕ್ಟೋಬರ್ 10 ರ ಒಳಗೆ ಎಲ್ಲಾ ಜಿಲ್ಲಾ ಸಮಿತಿಗಳ ತರಬೇತಿ ಶಿಬಿರ ನಡೆಸುವುದು.
- ಅಕ್ಟೋಬರ್ 12 ರಿಂದ ಜಿಲ್ಲಾ ಪಂಚಾಯತ್ ಕಛೇರಿಗಳ ಎದುರು ಧರಣಿ ಕಾರ್ಯಕ್ರಮ.
- ನವಂಬರ್ 12 ರಿಂದ ರಾಜ್ಯ ಕೇಂದ್ರದಲ್ಲಿ ಅನಿರ್ಧಿಷ್ಠ ಉಪವಾಸ ಸತ್ಯಾಗ್ರಹ.
- ನವಂಬರ್ 16 ರಂದು ಬೆಂಗಳೂರು ಚಲೋ. ಈ ಎಲ್ಲಾ ಹೋರಾಟಗಳಿಗೆ ಇತರೆ ಸಂಘಟನೆಗಳೊಡನೆ ಜಂಟಿ ಹೋರಾಟದ ನಿರ್ಣಯ ಕೈಗೊಳ್ಳಲಾಯಿತು.

ಈ ಎಲ್ಲಾ ಹೋರಾಟಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ನೌಕರರು ಪಾಲ್ಗೊಂಡು ಯಶಸ್ವಿ ಮಾಡುವಂತೆ ಸಂಘ ಮನವಿ ಮಾಡಿದೆ.

ಹೈಸ್ಕೂಲ್ ವಿದ್ಯಾರ್ಥಿಗಳಿಂದ ಜಿಲ್ಲಾ ಪಂಚಾಯತ್ ಚಲೋ

ಕಾರವಾರ ನಗರದಲ್ಲಿರುವ ಶತಮಾನಕ್ಕಿಂತ ಹಳೆಯದಾದ ಸರ್ಕಾರಿ ಹೈಸ್ಕೂಲ್ ಕಟ್ಟಡ ದುರಸ್ತಿ, ಪ್ರಯೋಗಾಲಯ, ಶೌಚಾಲಯ, ಗ್ರಂಥಾಲಯ ನಿರ್ಮಾಣ, ಅವಶ್ಯಕ ಶೈಕ್ಷಣಿಕ ಸೌಲಭ್ಯ ಒದಗಿಸಬೇಕು, ರಿಯಾಯತಿ ದರದಲ್ಲಿ ಪಠ್ಯ ಪುಸ್ತಕ ಒದಗಿಸಬೇಕು ಇತ್ಯಾದಿ 13 ಬೇಡಿಕೆಯಿಟ್ಟು ಎಸ್.ಎಫ್.ಐ. ನೇತೃತ್ವದಲ್ಲಿ ಜಿ.ಪಂ ಚಲೋ ಕಾರ್ಯಕ್ರಮ ಹಮ್ಮಿಕೊಂಡು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮನವಿ ಸಲ್ಲಿಸಿತು. ಜಿ.ಪಂ ಅಧೀನದಲ್ಲಿ ಬರುವ ಕಾಮಗಾರಿಗಳ ಸುಧಾರಣೆಗಳನ್ನು ಶೀಘ್ರ ಮುಗಿಸಿ, ಉಳಿದವುಗಳನ್ನು ಆಯಾ ಇಲಾಖೆಗೆ ತಿಳಿಸಲಾಗುತ್ತದೆಂದು ಭರವಸೆ ನೀಡಿದರು.

ಸಿಪಿಐ(ಎಂ) ಕಾರ್ಯಕರ್ತರ ರಾಜ್‌ಭವನ ಚಲೋ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿಪರೀತ ಬೆಲೆ ಏರಿಕೆ ವಿರುದ್ಧ ಸಿಪಿಐ (ಎಂ) ಕೇಂದ್ರ ಸಮಿತಿಯ ಕರೆಯ ಮೇರೆಗೆ ಅಖಿಲ ಭಾರತ ಮುಷ್ಕರದ ಅಂಗವಾಗಿ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯಡಿ ನೂರಾರು ಕಾರ್ಯಕರ್ತರು 16 ರಂದು ರಾಜ್‌ಭವನ್ ಚಲೋ ನಡೆಸಿದರು.

ಮೈಸೂರು ಬ್ಯಾಂಕ್ ವೃತ್ತದಿಂದ ಮೆರವಣಿಗೆ ನಡೆಸಿದ ಕಾರ್ಯಕರ್ತರು ರಾಜಭವನಕ್ಕೆ ತೆರಳಿ ಕೂಡಲೇ ಬೆಲೆ ಏರಿಕೆಯನ್ನು ಕೆಳಗಿಳಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸುವ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನಾಗಾರರನ್ನುದ್ದೇಶಿಸಿ ಮಾತನಾಡಿದ ಕಾಂ|| ಸೂರಿ ಕೇಂದ್ರದ ಬಿಜೆಪಿ ಸರ್ಕಾರ ಅಗತ್ಯ ವಸ್ತುಗಳ ಬೆಲೆಗಳನ್ನೆಲ್ಲಾ ಗಗನಕ್ಕೇರಿಸಿದೆ. ರಸಗೊಬ್ಬರದ ಮೇಲಿನ ಸಬ್ಸಿಡಿ ಕಡಿತ, ಪಡಿತರ ವ್ಯವಸ್ಥೆಯ ಕಡಿತ ಮಾಡಿ ರೈತರಿಗೆ, ಜನ ಸಾಮಾನ್ಯರಿಗೆ ಅನ್ಯಾಯ ವೆಸಗಿದೆ. ವಿದ್ಯುತ್ ಉತ್ಪಾದನೆಯನ್ನು ಖಾಸಗಿ ಕಂಪನಿಗಳಿಗೆ ನೀಡುತ್ತಿರುವ ಬಿಜೆಪಿ ರಾಜ್ಯದಲ್ಲಿ ವಿದ್ಯುತ್, ಗೊಬ್ಬರ ಬೆಲೆ ಏರಿಕೆ ವಿರುದ್ಧ ಮಾಡುತ್ತಿರುವ ಹೋರಾಟ, ಮೊಸಳೆ ಕಣ್ಣೀರಿನ ಮೂಲಕ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿಯುವ ಕನಸು ಕಾಣುವುದು ನಾಚಿಕೆಯ ಸಂಗತಿ ಎಂದರು.

ಅಡುಗೆ ಎಣ್ಣೆಯಲ್ಲಿನ ಕಲಬೆರಕೆ ಹತ್ತಾರು ಜನರ ಸಾವಿಗೆ ಬಿಜೆಪಿ ಕಾರಣವೆಂದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ||ಜಿ.ಎನ್. ನಾಗರಾಜ್. ಸಾಸಿವೆ ಎಣ್ಣೆಯಲ್ಲಿ ವಿಷಪೂರಿತ ಎಣ್ಣೆಕಾಳುಗಳು ಬೆರೆತದ್ದು ಆಕಸ್ಮಿಕವಲ್ಲ, ಇದರ ಹಿಂದೆ ದೊಡ್ಡ ದೊಡ್ಡ ಲಾಭಕೋರ ಕಾಳಸಂತೆಕೋರರ ಪಡೆಯೇ ಇದೆ ಎಂದರು. ಸಭೆಯನ್ನುದ್ದೇಶಿಸಿ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಪಿ.ಜಗನ್ನಾಥ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹೆಚ್. ಎನ್. ಗೋಪಾಲ ಗೌಡ, ರಾಜ್ಯ ಸಮಿತಿ ಸದಸ್ಯರಾದ ಕೆ.ಎಸ್. ವಿಮಲ ಮೊದಲಾದವರು ಮಾತನಾಡಿದರು.

ಪಂಚಾಯತ್ ಮೈದಾನದಲ್ಲಿ ವಾಣಿಜ್ಯ ಸಂಕೀರ್ಣಕ್ಕೆ ವಿರೋಧ

ಮಂಗಳೂರು: ಪೆರ್ಮನ್ನೂರು ಪಂಚಾಯತ್ ಮೈದಾನ ಈ ತನಕ ವಿವಿಧ ಕಲಾ, ಕ್ರೀಡಾ ಚಟುವಟಿಕೆಗಳಿಗೆ ಉಪಯೋಗವಾಗುತ್ತಿತ್ತು. ಈಗ ಮೈದಾನವನ್ನು ನಗರ ಪಾಲಿಕೆ ವಾಣಿಜ್ಯ ಸಂಕೀರ್ಣಕ್ಕೆ ಉಪಯೋಗಿಸಲು ನಿರ್ಣಯಿಸಿರುವುದನ್ನು ಸೆ. 10 ರಂದು ಸಭೆ ಸೇರಿದ ಕರ್ನಾಟಕ ಪ್ರಾಂತ ರೈತ ಸಂಘದ ಕೋಟೆಕಾರು ವೃತ್ತ ರೈತ ಸಂಘ ವಿರೋಧಿಸಿದೆ.

ಬಾಬು ಪೂಜಾರಿ ಪಾವೂರು ಅಧ್ಯಕ್ಷತೆಯಲ್ಲಿ ಸೇರಿದ ಸಭೆಯು 1994 ರ ಭೂ ಮಸೂದೆಯಂತೆ ಭೂ ನ್ಯಾಯಲಯಕ್ಕೆ ರೈತರು ಕೃಷಿ ಕೂಲಿಕಾರರು ಅರ್ಜಿ ಹಾಕಲು ಕಾಲಾವಕಾಶ ನೀಡುವಂತೆ ತಿದ್ದುಪಡಿ ತರಬೇಕು, ಸರ್ಕಾರಿ ಸ್ಥಳದಲ್ಲಿ ಮನೆಕಟ್ಟಿದವರಿಗೆ ಹಕ್ಕು ಪತ್ರಕ್ಕಾಗಿ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಬೇಕು ಹಾಗೂ ಕೃಷಿ ಕೂಲಿಕಾರರಿಗೆ 2 ಎ ನಂಬರ್ ಫಾರ್ಮಿನಲ್ಲಿ ಅರ್ಜಿ ಹಾಕಲು ಅವಕಾಶ ನೀಡುವಂತೆ ಸಭೆಯು ಸರ್ಕಾರವನ್ನು ಒತ್ತಾಯಿಸಿದೆ. ಸಭೆಯಲ್ಲಿ ತಾಲೂಕು ಕಾರ್ಯದರ್ಶಿ ರಾಮಚಂದ್ರ ಉಬ್ಬೆಲ್ ಉಪಸ್ಥಿತರಿದ್ದರು.

ಆಟೋ ಚಾಲಕನ ಸಾವಿನ ತನಿಖೆ ಹಾಗೂ ಪರಿಹಾರಕ್ಕಾಗಿ ಪ್ರತಿಭಟನೆ

ಬೆಂಗಳೂರಿನ ಅಲಸೂರು ಠಾಣೆಯ ಪೊಲೀಸ್ ವಶದಲ್ಲಿದ್ದ ಆಟೋ ಚಾಲಕ ರಾಜೇಂದ್ರನ ಸಂಶಯಾತ್ಮಕ ಸಾವಿನ ಬಗ್ಗೆ ತನಿಖೆ ನಡೆಸಲು ಹಾಗೂ ಮೃತನ ಕುಟುಂಬಕ್ಕೆ ಎರಡು ಲಕ್ಷ ರೂ ಪರಿಹಾರಕ್ಕೆ ಒತ್ತಾಯಿಸಿ ಸೆ. 15 ರಂದು ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ ಚಾಲಕರು ಅಲಸೂರು ಪೊಲೀಸ್ ಠಾಣೆ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಈ ಘಟನೆಗೆ ಸಂಬಂಧಿಸಿದ ಪೊಲೀಸರ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ಡಿಸಿಪಿಯವರನ್ನು ಒತ್ತಾಯಿಸಿದ ಮುಖಂಡರು ಪರಿಹಾರಕ್ಕೆ ಒತ್ತಾಯಿಸಿ ಮನವಿ ಸಲ್ಲಿಸಿದರು. ಮನವಿ ಸ್ವಿಕರಿಸಿದ ಡಿಸಿಪಿ ಒಂದು ವಾರದೊಳಗೆ ತನಿಖೆ ಪ್ರಗತಿ ನೀಡುವುದಾಗಿಯೂ ಮುಂದೆ ಇಂತಹ ಘಟನೆಗಳು ಸಂಭವಿಸದಂತೆ ಕ್ರಮವಹಿಸುವುದಾಗಿ ಭರವಸೆ ನೀಡಿದರು.

ಸಂಘದ ಮುಖಂಡರುಗಳಾದ ಜೆ. ಸಿದ್ದಯ್ಯ ಸಿ.ರಾಮಚಂದ್ರ ಹಾಗೂ ಮೀನಾಕ್ಷಿಸುಂದರಂ ಸೇರಿದಂತೆ ಹಲವು ಸದಸ್ಯರು ಭಾಗವಹಿಸಿದ್ದರು.

ಉತ್ತರಕನ್ನಡ: ವಿದ್ಯಾರ್ಥಿವಿರೋಧಿ ನೀತಿ; ಭೂತ ದಹನ

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ವತಿಯಿಂದ ಸೆ. 7 ರಂದು ಶಿಕ್ಷಣದ ಖಾಸಗೀಕರಣ, ಕೋಮುವಾದ, ಅಣ್ವಸ್ತ್ರ ಪ್ರೈಪೋಟಿ, ಆರ್ಥಿಕ ಉದಾರೀಕರಣವನ್ನು ಅನುಸರಿಸುತ್ತಿರುವ ಕೇಂದ್ರ ಸರ್ಕಾರದ ನೀತಿಯನ್ನು ವಿರೋಧಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿ ಡಾ|| ಮುರಳಿ ಮನೋಹರ ಜೋಷಿಯವರ ಪ್ರತಿಕೃತಿ ದಹನ ಮಾಡಲಾಯಿತು.

ಎಸ್.ಎಫ್.ಐ. ಉ.ಕ.ಜಿಲ್ಲಾಧ್ಯಕ್ಷೆ ಯಮುನಾ ಇತ್ತೀಚೆಗೆ ಇತಿಹಾಸ ಸಂಶೋಧನ ಮಂಡಲಿಗೆ ಕೋಮುವಾದಿಗಳನ್ನೇ ನೇಮಿಸಿದ್ದರಿಂದ ಶಿಕ್ಷಣವನ್ನು ತಮಗೆ ಬೇಕಾದಂತೆ ರೂಡಿಸಲು ಕೋಮುವಾದೀಕರಿಸಲು ಈ ಸರ್ಕಾರ ಹೊರಟಿವೆ ಎಂದರು.

ಕಾರ್ಯಕ್ರಮದ ನೇತೃತ್ವವನ್ನು ಲಕ್ಷ್ಮಣಪಟಗಾರ, ನಿರ್ಮಲಾ, ಸಂತೋಷನಾಯ್ಕ, ಶಿವಾನಂದ, ವಸಂತ.ಕೆ ವೆಂಕಟರಮಣ ಗೌಡ ಶಾರದಾನಾಯ್ಕ ಸತ್ಯನಾರಾಯಣ ಮುಂತಾದವರು ವಹಿಸಿದ್ದರು.



ಮಾಸ್ತು - ನೆನಪುಗಳು

◀ ಇತ್ತೀಚಿಗೆ ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಡೆದ ಅಖಿಲ ಭಾರತ ಜನವಾದಿ ಮಹಿಳಾ ಸಂಘದ ಸಮ್ಮೇಳನಕ್ಕೆ ಅಪಾರ ಬೆಂಬಲ, ನೆರವು ಒದಗಿಸಿದ್ದಕ್ಕಾಗಿ ಪ್ರತಿನಿಧಿಗಳ ಭಾರೀ ಕೃತಜ್ಞತೆ ಸ್ವೀಕರಿಸುತ್ತಿರುವ ಸರಳ, ಸಜ್ಜನ ಸಂಗಾತಿ.

▶ ಸಿಪಿಐ(ಎಂ)ನ ರಾಜ್ಯ ಸಮ್ಮೇಳನದಲ್ಲಿ ಚರ್ಚೆಗೆ ಉತ್ತರಿಸುತ್ತಿರುವ ಮಾಸ್ತು. ಇದು ಅವರಿಗೆ ಕೊನೆಯ ಸಮ್ಮೇಳನವಾಯ್ತು!



ಪಂಚ್‌ಮಡೀ ವಿಚಾರಮಂಥನ ಕಾಂಗ್ರೆಸ್ಸಿನ ಪುನರುಜ್ಜೀವನಕ್ಕೆ ನೆರವಾಗಬಲ್ಲುದೇ?

ಕಾಂಗ್ರೆಸ್ ತನ್ನ ಧೋರಣೆಗಳನ್ನು ಪ್ರಾಮಾಣಿಕ ಪರಿಶೀಲನೆ ನಡೆಸಿ ಇದುವರೆಗಿನ ದಾರಿಯನ್ನು ಬಿಡಲು ಸಿದ್ಧವಿದ್ದರೆ ನೆರವಾಗಬಲ್ಲದು. ಪಂಚ್‌ಮಡೀ 'ವಿಚಾರಮಂಥನ' ಈ ದಿಕ್ಕಿನಲ್ಲಿ ಹೆಜ್ಜೆಯಿಟ್ಟಿದೆ. ಆದರೆ ಅದು ಸಾಲದು, ಒಟ್ಟಾರೆಯಾಗಿ ಈ ವಿಚಾರಮಂಥನ ಅದರ ಧೋರಣೆಗಳಲ್ಲಿ ತೀವ್ರ ಬದಲಾವಣೆ ತರುವಂತೆ ಕಾಣುತ್ತಿಲ್ಲ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು.

23 ವರ್ಷಗಳ ಹಿಂದೆ 1975 ರಲ್ಲಿನ ಉತ್ತರ ಪ್ರದೇಶದ ರೋನಾದಲ್ಲಿ ಇಂತಹ ಒಂದು ಸಭೆ ನಡೆದಿತ್ತು. ಆ ನಂತರ ಗಂಗಾ ನದಿಯಲ್ಲಿ ಬಹಳ ನೀರು ಹರಿದು ಹೋಗಿದೆ. ಮಧ್ಯಪ್ರದೇಶದ ಪ್ರವಾಸಿ ತಾಣ ಪಂಚ್‌ಮಡಿಯ ಈ 'ವಿಚಾರ ಮಂಥನ ಸಭೆ'ಯಲ್ಲಿ ಭಾಗವಹಿಸಿದವರು ಈ ಅವಧಿಯಲ್ಲಿ ನಡೆದ ಪ್ರಳಯಾಂತಕ ಬದಲಾವಣೆಗಳನ್ನು ವಿಮರ್ಶಿಸ ಬೇಕಾಗಿತ್ತು. ನಿಸ್ಸಂದೇಹವಾಗಿಯೂ ಮೇ 1996 ರಲ್ಲಿ ಹಾಗೂ ಫೆಬ್ರವರಿ ಮಾರ್ಚ್ 1998 ರಲ್ಲಿ ಸಂಸದೀಯ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಹೀನಾಯ ಸೋಲು ಇದರಲ್ಲಿ ಮುಖ್ಯವಾದದ್ದು. ಕೋಮುವಾದಿ ಶಕ್ತಿಗಳೆದುರು ಶರಣಾಗತಿ, ಅದರ ಪ್ರತೀಕವಾಗಿ ಬಿಟ್ಟ ಬಾಬ್ರಿಮಸೀದಿ ಧ್ವಂಸ, ದಲಿತ ವಿಭಾಗಗಳಿಂದ, ಹಿಂದುಳಿದ ವರ್ಗಗಳ ಜನಗಳಿಂದಲೂ ಅದು ದೂರವಾಗಿ ಬಿಟ್ಟದ್ದು, ಜತೆಗೆ ಸಂಯುಕ್ತ ರಂಗ ಸರಕಾರವನ್ನು ಬ್ಲಾಕ್‌ಮೇಲ್ ಮಾಡಿದ್ದರಿಂದ ಅದರ ಪ್ರತಿಷ್ಠೆಗೆ ತಟ್ಟಿದ ಕಳಂಕ - ಈ ಹಿನ್ನೆಲೆಯಲ್ಲಿ ಪಂಚ್‌ಮಡಿ ಸಭೆಯನ್ನು ನಡೆಸಲಾಯಿತು. ಕಾಂಗ್ರೆಸ್‌ನಲ್ಲಿ ಎಲ್ಲಿ ಏನು ತಪ್ಪಾಗಿದೆ ಎಂದು ಆತ್ಮಾವಲೋಕನದ ಮೊದಲ ಪ್ರಮುಖ ಪ್ರಯತ್ನವಾಗಿ ಇದು ಬಂದಿತ್ತು.

ಹಿರಿಯ ಕಾಂಗ್ರೆಸ್ ಮುಖಂಡರು ಐದು ಹಿನ್ನೆಲೆ ಪ್ರಬಂಧಗಳನ್ನು ಮಂಡಿಸಿದರು - ರಾಜಕೀಯ ಸನ್ನಿವೇಶ, ಆರ್ಥಿಕ ನೀತಿಗಳು, ಕೃಷಿ, ವಿದೇಶಾಂಗ ನೀತಿ ಮತ್ತು ಪಕ್ಷದ ಸಂಘಟನೆ. ಇದನ್ನು ನಂತರ ಅಂತಿಮ ಗೊಳಿಸಲಾಗುವುದಂತೆ. ಕೊನೆಗೆ ಸೆಪ್ಟೆಂಬರ್ 6 ರಂದು ಶ್ರೀಮತಿ ಸೋನಿಯಾಗಾಂಧಿ ನೇತೃತ್ವದಲ್ಲಿ ಮುಂದೊತ್ತುವ ಆಶಾಭಾವನೆ ವ್ಯಕ್ತಪಡಿಸುವ ಘೋಷಣೆಯನ್ನು ಅಂಗೀಕರಿಸಲಾಯಿತು. ಈ ಎಲ್ಲವುಗಳ ಸಾರಾಂಶ ಇಷ್ಟೆ - ಪಕ್ಷದ ಪಾರಂಪರಿಕ ಬೆಂಬಲಿಗರನ್ನು ಮತ್ತೆ ಪಡೆಯುವುದು ಹೇಗೆ, ಅದಕ್ಕೆ ಏನು ಬದಲಾವಣೆ ತರಬೇಕು.

ಕೆಳಗಿನಿಂದ ಒತ್ತಡ

ರಾಜಕೀಯ ಸನ್ನಿವೇಶ ಕುರಿತಂತೆ ಇದುವರೆಗಿನ ದಾರಿಯನ್ನು ಬದಲಿಸಬೇಕಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ಮುಖಂಡರೂ ಇದ್ದರು. ಒಂದೋ ಕೆಲವು ನೀತಿಗಳನ್ನು ಸರಿಯಾಗಿ ಜಾರಿ ಮಾಡಿಲ್ಲ, ಅಥವಾ ಆ ಬಗ್ಗೆ ಸರಿಯಾದ ಪ್ರಚಾರ ನಡೆಸಿಲ್ಲ ಎಂಬ ಈ ಅಭಿಪ್ರಾಯದ ಮರ್ಮ ಆತ್ಮಾವಲೋಕನದ ಅಗತ್ಯವಿಲ್ಲ ಎಂದೇ ಆಗುತ್ತದೆ. ಆದರೆ ಕೆಳಗಿನಿಂದ ಬಂದ ಒತ್ತಡದಿಂದಾಗಿ ಪಕ್ಷ ಪರಿಶಿಷ್ಟ ಜಾತಿ/ವರ್ಗಗಳ ದುರ್ಬಲ ವಿಭಾಗಗಳ ಜನಗಳಿಂದ ಏಕೆ ದೂರ ತಳ್ಳಲ್ಪಟ್ಟಿತು ಎಂಬ ಬಗ್ಗೆ ಚರ್ಚೆ ನಡೆಯುವಂತಾಯಿತು. ಇದುವರೆಗೆ ಒಬ್ಬ ಸರ್ವೋಚ್ಚ ಮುಖಂಡನ/ಳ ಮಾತೇ ಎಲ್ಲವೂ ಆಗಿದ್ದ ಕಾಂಗ್ರೆಸ್‌ನ ಈ ಸಭೆಯಲ್ಲಿ ಮಾತ್ರ ಕೇಂದ್ರ ಮಟ್ಟಕ್ಕಿಂತ ಕೆಳಗಿನ ಮಟ್ಟಗಳ ಮುಖಂಡರೂ ಮುಕ್ತವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು ಸ್ವಲ್ಪ ಮಟ್ಟಿನ ಪ್ರಜಾಪ್ರಭುತ್ವಕ್ಕೆ ಅವಕಾಶ ನೀಡಿದ್ದರ ಸಂಕೇತವಾಗಿತ್ತು.

ವಿದೇಶಾಂಗ ನೀತಿ ಕುರಿತ ದಸ್ತಾವೇಜು ಒಟ್ಟಾರೆಯಾಗಿ ಭಾರತದ ಮೂಲ ವಿದೇಶಾಂಗ ನೀತಿಯ ಚೌಕಟ್ಟನ್ನು ಉಳಿಸಿಕೊಂಡರೆ ಅಂತ ಭಾರತದ ಜಾಗತಿಕ ಪ್ರತಿಷ್ಠೆಯನ್ನು ಪುನರುಜ್ಜೀವನಗೊಳಿಸಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

ಆರ್ಥಿಕ ಧೋರಣೆಗಳನ್ನು ಕುರಿತಂತೆ ದೊಡ್ಡ-ದೊಡ್ಡ ಮಾತುಗಳಂತೂ ಇದ್ದವು - ಸಮಾಜವಾದಕ್ಕೆ ಬದ್ಧತೆ, ಸಮಾಜವಾದೀ ಮಾದರಿಯ ಸಮಾಜ ಇತ್ಯಾದಿ ಇತ್ಯಾದಿ. ಆದರೆ ಕಾಂಗ್ರೆಸ್ ಪಕ್ಷ ಅಧಿಕಾರದ ಗುತ್ತೇದಾರಿಕೆ ಹೊಂದಿದ್ದಾಗ ಎದ್ದು ಕಂಡಿದ್ದ ಅಂಶವೆಂದರೆ ಅವರ ಮಾತು ಮತ್ತು ಕೃತಿಯಲ್ಲಿನ ಅಗಾಧ ಅಂತರ. 1991 ರಿಂದ ಆರಂಭವಾದ ಐ.ಎಂ.ಎಫ್.-ವಿಶ್ವಬ್ಯಾಂಕ್ ಕೊಟ್ಟ ಹೇರಿದ ನೀತಿಗಳು ಇದಕ್ಕೆ ಉದಾಹರಣೆ. ಸ್ಥಳೀಯ ಉದ್ದಿಮೆಗಳಿಗೆ "ಅನ್ಯಾಯ ಪೂರ್ಣ ಹೋರಾಟ ಸ್ಪರ್ಧೆ" ಬಗ್ಗೆ, ಬಡವರಿಗೆ, ಅಗತ್ಯವುಳ್ಳವರಿಗೆ ಸಬ್ಸಿಡಿ ಇತ್ಯಾದಿಗಳ ಬಗ್ಗೆ ಈಗ ಮಾತನಾಡುವ ಕಾಂಗ್ರೆಸ್ 1991 ರಿಂದ ಆರಂಭಿಸಿದ ಆರ್ಥಿಕ ಧೋರಣೆಗಳು ಇದನ್ನೇ ಮಾಡಿದ್ದು ಎಂದು ಕಾಣುವುದಿಲ್ಲ. ಆಗ್ನೇಯ ಏಶ್ಯಾ, ದಕ್ಷಿಣ ಕೊರಿಯಾ, ರಶ್ಯಾ, ಮೆಕ್ಸಿಕೋ, ಅಷ್ಟೇ ಏಕೆ ಪಾಕಿಸ್ತಾನದ ಅನುಭವಗಳಿಂದ ಈ ಪಕ್ಷ ಇನ್ನೂ ಪಾಠ ಕಲಿತಂತಿಲ್ಲ. ಎಷ್ಟೇ ದೊಡ್ಡ ದೊಡ್ಡ ಮಾತುಗಳನ್ನಾಡಿದರೂ ಕಾಂಗ್ರೆಸ್ ಆರ್ಥಿಕ ನೀತಿಗಳನ್ನು ಕುರಿತಂತೆ ತನ್ನ ನಿಲುವನ್ನು ಬದಲಿಸಲು ಸಿದ್ಧವಿಲ್ಲ, ಅಲ್ಪ ಸಮಯದಲ್ಲೇ ಹಲವಾರು ದೇಶಗಳನ್ನು ಹಾಳುಗೆಡವಿದ 'ಸಂರಚನಾ ಹೊಂದಾಣಿಕೆ ಕಾರ್ಯಕ್ರಮ'ವನ್ನು ಬಿಡಲೂ ಅದು ಸಿದ್ಧವಿಲ್ಲ ಎಂಬುದು ಸ್ಪಷ್ಟ.

ಹೇಳಿದ್ದು-ಮಾಡಿದ್ದು

ಕೃಷಿ ಕುರಿತಂತೆ ಈ ಪಂಚ್‌ಮಡೀ ಘೋಷಣೆ 35 ಅಂಶಗಳ ಕಾರ್ಯಕ್ರಮವನ್ನಿಟ್ಟಿದೆ. ಅದಕ್ಕೆ ಇನ್ನೂ 6 ಅಂಶಗಳನ್ನು ಸೇರಿಸಲಾಗಿದೆ. ಪಂಚಾಯತ್ ರಾಜ್ ಕುರಿತಂತೆ 14 ಅಂಶಗಳ ಇನ್ನೊಂದು ಕಾರ್ಯಕ್ರಮ.

ಈ ವಿಭಾಗದಲ್ಲೂ ಪಂಚ್‌ಮಡೀ ಘೋಷಣೆ ಹಿಂದೆ ಕಾಂಗ್ರೆಸ್ ಬಹಳ ಸಲ ಹೇಳಿದ್ದನ್ನು, ಆದರೆ ಮಾಡದ್ದನ್ನು ಮತ್ತೊಮ್ಮೆ ಹೇಳಿದೆ. ಉದಾ: ಭೂಸುಧಾರಣೆಯ ಶಾಸನ ಜ್ಯಾರಿಯ ಬಗ್ಗೆ ಮಾತನಾಡಿರುವ ಈ ಘೋಷಣೆ ಈಗಲೂ ಕೆಲವೇ ಕೈಗಳಲ್ಲಿ ಭೂಮಿಯ ಕೇಂದ್ರೀಕರಣದ ಬಗ್ಗೆಯಾಗಲೀ, ಬಡವರಿಗೆ ಭೂಮಿ ಹಂಚಿ ಅವರ ಪರಿಸ್ಥಿತಿ ಸುಧಾರಿಸುವ ಬಗ್ಗೆ ಯಾಗಲೀ ಚಕಾರವೆತ್ತಿಲ್ಲ.

ಒಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ಇಲ್ಲಿ ಹೊಸದಾಗಿ ಕಂಡುಕೊಂಡಿರುವ ತೀವ್ರಗಾಮಿ ನಿಲುವು ದಲಿತರಿಗೆ, ಬುಡಕಟ್ಟು ಜನಗಳಿಗೆ, ಗ್ರಾಮೀಣ ಬಡವರಿಗೆ ಅಗತ್ಯ ನೆರವು ಒದಗಿಸಲು ಏನು ಮಾಡುತ್ತದೋ ಗೊತ್ತಿಲ್ಲ. ಈ ಗ್ರಾಮೀಣ ಬಡವರು ಬಡವರಾಗಿ ರುವುದು ಭೂಮಿ ಮತ್ತು ಉತ್ಪಾದನಾ ಸಾಧನಗಳು ಕೇವಲ ಕೆಲವರ ಕೈಯಲ್ಲೇ ಕೇಂದ್ರೀಕೃತವಾಗಿರುವುದರಿಂದ ಎಂಬ ಸರಳ ಸತ್ಯವನ್ನು ಕಾಂಗ್ರೆಸ್ ಮುಖಂಡರು ಅರಿಯುತ್ತಾರೆಯೇ?

ನಮ್ಮ ರಾಜಕೀಯದ ವಿಕಸನದಲ್ಲಿ ಒಂದು ತಾತ್ಕಾಲಿಕ ಹಂತ ಎಂದು ಕಾಂಗ್ರೆಸ್ ಪರಿಗಣಿಸುತ್ತದೆ" ಎಂದು ಹೇಳಿದೆ. ಈ ಘೋಷಣೆಯಲ್ಲಿ ಇನ್ನೊಂದೆಡೆ "ಪಕ್ಷ ಮತ್ತೆ ರಾಷ್ಟ್ರೀಯ ವ್ಯವಹಾರಗಳಲ್ಲಿ ತನ್ನ ಪ್ರಾಧಾನ್ಯತೆ ಪಡೆಯುವಂತೆ" ಮಾಡುವ ಪ್ರತಿಜ್ಞೆಯೂ ಇದೆ. ಅಂದರೆ ಕಾಂಗ್ರೆಸ್ ಇತರ ಪಕ್ಷಗಳೊಂದಿಗೆ ಮೈತ್ರಿಗಳನ್ನು ಒಂದು ಅಲ್ಪಾವಧಿ ಕ್ರಮವಾಗಿ ಮಾತ್ರ ಸ್ವೀಕರಿಸುತ್ತದೆ.

ಒಂದು ಸಕಾರಾತ್ಮಕ ಅರಿವು

ಆದರೆ ಪಂಚ್‌ಮಡಿಯಲ್ಲಿ ಒಂದು ಸಕಾರಾತ್ಮಕ ಅರಿವೂ ಕಂಡು ಬಂತು. "ರಾಜಕೀಯ ದೃಶ್ಯ ಮತ್ತು ಭಾರತ ರಾಷ್ಟ್ರೀಯ ಕಾಂಗ್ರೆಸ್' ಎಂಬ ಹಿನ್ನೆಲೆ ಪ್ರಬಂಧ ಸ್ಪಷ್ಟವಾಗಿ ಹೀಗೆ ಹೇಳಿದೆ.

"ಪಕ್ಷ ಪ್ರಭಾವಶಾಲೀ ಮುಖಂಡರ ಮೇಲೆ ಶೋಚನೀಯ ರೀತಿಯಲ್ಲಿ ಅವಲಂಬಿತವಾಗಿದೆ. ... ಪ್ರಭಾವೀ ಮುಖಂಡರ ಪೂರ್ಣ ಪ್ರಯೋಜನೆ ಪಡೆಯಲು ಪಕ್ಷಕ್ಕೆ ಒಂದು ಬಲವಾದ ಸಂಘಟನೆ, ಬದ್ಧ ಹಾಗೂ ಸಮರ್ಥ ಸಿಬ್ಬಂದಿ, ಸುಯೋಗ್ಯ ಕಾರ್ಯಕ್ರಮಗಳು ಮತ್ತು ಅವುಗಳ ಪರಿಣಾಮಕಾರಿ ಜ್ಯಾರಿ ಬೇಕು"



ಇದುವರೆಗೆ ಒಬ್ಬ ಸರ್ವೋಚ್ಚ ಮುಖಂಡನ/ಳ ಮಾತೇ ಎಲ್ಲವೂ ಆಗಿದ್ದ ಕಾಂಗ್ರೆಸ್‌ನ ಈ ಸಭೆಯಲ್ಲಿ ಮಾತ್ರ ಕೇಂದ್ರ ಮಟ್ಟಕ್ಕಿಂತ ಕೆಳಗಿನ ಮಟ್ಟಗಳ ಮುಖಂಡರೂ ಮುಕ್ತವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು ಸ್ವಲ್ಪ ಮಟ್ಟಿನ ಪ್ರಜಾಪ್ರಭುತ್ವಕ್ಕೆ ಅವಕಾಶ ನೀಡಿದ್ದರ ಸಂಕೇತವಾಗಿತ್ತು.

ಈ ಸಭೆ ಕೋಮುವಾದದ ಮೇಲೆ ಗಮನ ಕೇಂದ್ರೀಕರಿಸಿತು. ಅದು ಸಹಜ ಕೂಡ. ಜಾತ್ಯಾತೀತತೆಯ 'ಕಾಂಗ್ರೆಸ್ ಪರಿಕಲ್ಪನೆ'ಗೆ ಬದ್ಧವಾಗುವ ಅಗತ್ಯವನ್ನು ಹೇಳುತ್ತಾ ಈ ಸಭೆ ಬಾಬ್ರಿ ಮಸೀದಿ ಪ್ರಶ್ನೆಯನ್ನು ಕಾನೂನಿನ ಪ್ರಕಾರ ತ್ವರಿತವಾಗಿ ಪರಿಹರಿಸುವುದಾಗಿ, ಕೋಮುವಾದಿ ಶಕ್ತಿಗಳ ಸವಾಲನ್ನು ಯಾವುದೇ ಹಿಂಜರಿಕೆಯಿಲ್ಲದೆ ಎದುರಿಸುವುದಾಗಿ ಹೇಳಿತು. ಆದರೆ ಅಯೋಧ್ಯೆಯಲ್ಲಿ ಕೋಮುವಾದಿ ಕೂಟದ ಮಂದಿ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಲು ಸೇರಿದ್ದಾಗ ತಾನು ಏನು ಪಾತ್ರ ವಹಿಸಿದೆ ಎಂಬ ಬಗ್ಗೆ ಆತ್ಮಾವಲೋಕನ ಮಾಡಲು ಹಿಂಜರಿಯಿತು!

ಸಹಜವಾಗಿಯೇ ಪಂಚ್‌ಮಡೀಯಲ್ಲಿ ಕಾಂಗ್ರೆಸ್ ಸಮ್ಮಿಶ್ರ ರಾಜಕೀಯದ ಬಗ್ಗೆ ಚರ್ಚಿಸಿತು. ಕೆಲವು ಹಿರಿಯ ಮುಖಂಡರು ಇತರ ಪಕ್ಷಗಳೊಂದಿಗೆ ಸಮ್ಮಿಶ್ರ ಕೂಟಗಳನ್ನು ರಚಿಸುವುದನ್ನು ವಿರೋಧಿಸಿದರು. ಕಾಂಗ್ರೆಸ್ ತಾನಾಗಿಯೇ ಸಂಘಟನೆಯನ್ನು ಬಲಪಡಿಸಿಕೊಂಡು ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂಬುದು ಅವರ ನಿರೀಕ್ಷೆ. ಆದರೆ ಕೆಳಗಿನ ಮಟ್ಟಗಳಿಂದ ಬಂದವರು ಇದನ್ನು ಒಪ್ಪಲಿಲ್ಲ. ಏಕೆಂದರೆ ಅವರಿಗೆ ವಾಸ್ತವತೆಯ ಅರಿವಿತ್ತು.

ಸಭೆ ಅಂಗೀಕರಿಸಿದ ಘೋಷಣೆ ಈ ಎರಡೂ ಅಭಿಪ್ರಾಯಗಳನ್ನು ಹೊಂದಿಸಲು ಪ್ರಯತ್ನಿಸಿತು.

"ಏಕ ಪಕ್ಷ ಸರಕಾರಗಳನ್ನು ರಚಿಸುವಲ್ಲಿನ ಈಗಿನ ತೊಂದರೆಗಳು

ಮುಂಬರುವ ದಿನಗಳಲ್ಲಿ ಈ ಮಾತುಗಳು ಎಷ್ಟರ ಮಟ್ಟಿಗೆ ಜ್ಯಾರಿಗೆ ಬರುತ್ತದೋ ನೋಡಬೇಕು.

ಅದೇನೇ ಇರಲಿ, ಬಲವಾದ ಸಂಘಟನೆಯ ಬಗ್ಗೆ ಮಾತನಾಡಿರುವ ಕಾಂಗ್ರೆಸ್ ಆಂತರಿಕ ಪ್ರಜಾಪ್ರಭುತ್ವವನ್ನು ಮತ್ತೆ ಅಂಗೀಕರಿಸಬೇಕಾಗುತ್ತದೆ, ಇಲ್ಲವಾದರೆ ಜನಸಮೂಹಗಳು ಅವರ ಮಾತುಗಳನ್ನು ಗಂಭೀರವಾಗಿ ತಗೊಳ್ಳಲಾರದು. ಉತ್ತರ ಪ್ರದೇಶದಲ್ಲಿ ತನ್ನ ವಿಧಾನ ಮಂಡಳ ಗುಂಪಿನ ದೊಡ್ಡ ವಿಭಾಗ ಬಿ.ಜೆ.ಪಿ.ಗೆ ಹೋಗಿರುವುದನ್ನು ಕಂಡ ಈ ಪಕ್ಷ ಸೈದ್ಧಾಂತಿಕ ಬದ್ಧತೆ ಹೊಂದಿರುವ ಕಾರ್ಯಕರ್ತರ ಬಗ್ಗೆ ಮಾತನಾಡಿರುವುದು, 'ಸುಯೋಗ್ಯ ಕಾರ್ಯಕ್ರಮಗಳ' ಬಗ್ಗೆ ಮಾತನಾಡಿರುವುದು, ಸಾರ್ಥಕವಾಗಬೇಕಾದರೆ, ತಾನು ಕಳಕೊಂಡ ನೆಲೆಯನ್ನು ಮತ್ತೆ ಗಳಿಸಬೇಕಾದರೆ ಅದು ಇದುವರೆಗೆ ಅನುಸರಿಸಿಕೊಂಡು ಬಂದ ನೀತಿಗಳ ಬಗ್ಗೆ ಪ್ರಾಮಾಣಿಕ ಪುನರಾಲೋಚನೆ ನಡೆಸಿ ಭಿನ್ನ ದಾರಿ ಹಿಡಿದರೆ ಮಾತ್ರ ಸಾಧ್ಯ. ಪಂಚ್‌ಮಡಿಯಲ್ಲಿ ಈ ದಿಕ್ಕಿನಲ್ಲಿ ಅದು ಒಂದು ಆರಂಭ ಮಾಡಿದೆ. ಆದರೆ ಅದು ಸಾಕಷ್ಟು ಪ್ರಮಾಣದಲ್ಲಿಲ್ಲ. ಸಾಮಾನ್ಯ ಕಾಂಗ್ರೆಸ್ಸಿಗರು ಈ ದಿಕ್ಕಿನಲ್ಲಿ ಎಚ್ಚೆತ್ತು ಒತ್ತಡ ಹಾಕುತ್ತಾರೆಯೇ? - ಸಮಯವೇ ಹೇಳಬೇಕು.

ಅಲಿಪ್ತ ಆಂದೋಲನದ 12ನೇ ಶೃಂಗ ಸಮ್ಮೇಳನ 'ಹೊಸ ವಿಶ್ವ ವ್ಯವಸ್ಥೆ' ಹೇರುವ ಸಾಮ್ರಾಜ್ಯಶಾಹೀ ಪ್ರಯತ್ನಗಳ ಹಿನ್ನೆಲೆಯಲ್ಲಿ ಅದನ್ನು ತಡೆಹಿಡಿಯುವ ಶಕ್ತಿಯಾಗಿ ಈ ಆಂದೋಲನಕ್ಕೆ ಹೊಸ ದಿಕ್ಕು ನೀಡುವ ಒಂದು ಸಂದರ್ಭವಾಗಬಹುದು ಎಂದು ನಿರೀಕ್ಷಿಸಲಾಗಿತ್ತು. ಈ ನಿರೀಕ್ಷೆಗೆ ಕಾರಣವೂ ಇದೆ. ಸೋವಿಯೆತ್ ಒಕ್ಕೂಟ ಮತ್ತು ಪೂರ್ವ ಯೂರೋಪ್‌ನಲ್ಲಿ ಸಮಾಜವಾದದ ಕುಸಿತದ ನಂತರವೂ ಅಲಿಪ್ತ ಆಂದೋಲನಕ್ಕೆ ಒಂದು ಬಲಿಷ್ಟ ಆಂದೋಲನವಾಗಿ ಬೆಳೆದು ಸಾಮ್ರಾಜ್ಯಶಾಹಿ ತಂತ್ರಗಳ ವಿರುದ್ಧ ಮುಖ್ಯವಾಗಿ ಅದರ ಆರ್ಥಿಕ ಯಜಮಾನಿಕೆಯನ್ನು ಎದುರಿಸಬಲ್ಲ ಸಾಮರ್ಥ್ಯ ಇನ್ನೂ ಇದೆ ಎಂದು ವಿಶ್ವಾದ್ಯಂತ ಶಾಂತಿಪ್ರಿಯರ, ಪ್ರಗತಿಪರರ ಅನಿಸಿಕೆ.

ವರ್ಣ ದ್ವೇಷದ ವಿರುದ್ಧ ಹೋರಾಟ ನಡೆಸುತ್ತಿದ್ದ, ಅದರಿಂದಾಗಿ ಇತ್ತೀಚಿನವರೆಗೂ ಸದಾ ಅಲಿಪ್ತ ಆಂದೋಲನದಲ್ಲಿ ಇರುತ್ತಿದ್ದ ದಕ್ಷಿಣ ಆಫ್ರಿಕಾದಲ್ಲೇ ಈ ಬಾರಿ ಈ ಸಮ್ಮೇಳನ ನಡೆಯುತ್ತಿರುವುದು, ಉನ್ನತ ಪರಂಪರೆ ಮತ್ತು ವ್ಯಕ್ತಿತ್ವದ ನೆಲ್ಸನ್ ಮಂಡೇಲಾ ಈ ಆಂದೋಲನದ ಅಧ್ಯಕ್ಷತೆ ವಹಿಸುತ್ತಿರುವುದು ಈ ನಿರೀಕ್ಷೆಯನ್ನು ಬಲಪಡಿಸಿತ್ತು. ಈ ಬಾರಿಯ ಸಮ್ಮೇಳನದಲ್ಲಿ ಹಿಂದಿಗಿಂತಲೂ ಹೆಚ್ಚು ಸಂಖ್ಯೆಯಲ್ಲಿ ಮೂರನೇ ಜಗತ್ತಿನ ದೇಶಗಳು ಭಾಗವಹಿಸುತ್ತಿರುವುದು ಇನ್ನೊಂದು ಅಂಶವಾಗಿತ್ತು.

ಮಾತು ಮತ್ತು ಕೃತಿಯ ನಡುವೆ ಅಪಾರ ಅಂತರ ಹಿಂದಿನ ಎರಡು ಶೃಂಗಸಮ್ಮೇಳನಗಳ ವಿಶಿಷ್ಟ ಲಕ್ಷಣವಾಗಿತ್ತು. ಶ್ರೀಮಂತ, ಸದುದ್ದೇಶದ ಘೋಷಣೆಗಳನ್ನು ಅಂಗೀಕರಿಸಿದ ಸಮ್ಮೇಳನಗಳು ಅವನ್ನು ಜ್ಯಾರಿ ಮಾಡುವಲ್ಲಿ ವಿಫಲವಾದವು.


12ನೇ ಸಮ್ಮೇಳನದಲ್ಲಿ ಮತ್ತೆ ದಕ್ಷಿಣ ಆಫ್ರಿಕಾ ಮತ್ತು ನೆಲ್ಸನ್ ಮಂಡೇಲಾ ನವ-ಉದಾರವಾದಿ ಆರ್ಥಿಕ ನೀತಿಗಳ ಪರಿಣಾಮ, ಶ್ರೀಮಂತ ಮತ್ತು ಬಡದೇಶಗಳ ನಡುವೆ ಹೆಚ್ಚುತ್ತಿರುವ ಅಂತರ ಇತ್ಯಾದಿಗಳ ಬಗ್ಗೆ ಮಾತನಾಡಿದರೂ ಸಮ್ಮೇಳನದ ಕಲಾಪಗಳಲ್ಲಿ ದಕ್ಷಿಣ ಆಫ್ರಿಕಾದ ಬಿಕ್ಕಟ್ಟು, ಭಯೋತ್ಪಾದಕತೆ ಮತ್ತು ಪರಮಾಣು ಪ್ರಸರಣ ಇವೇ ಮುಖ್ಯವಾಗಿ ಬಿಟ್ಟವು. ಆರ್ಥಿಕ ಪ್ರಶ್ನೆಗಳು ಬದಿಗೊತ್ತಲ್ಪಟ್ಟವು.

ಆಫ್ರಿಕಾ ಖಂಡದಲ್ಲೇ ಸಮ್ಮೇಳನ ನಡೆಯುತ್ತಿದ್ದದ್ದರಿಂದ ಕಾಂಗೋದಲ್ಲಿನ ಆಂತರಿಕ ಯುದ್ಧ ಈ ಸಮ್ಮೇಳನದಲ್ಲಿ ಕೇಂದ್ರ ವಿಷಯವಾಗಿಬಿಟ್ಟಿತು. ಕಾಂಗೋದ ಕಬೀಲಾಗೆ ಅಂಗೋಲಾ, ನಮೀಬಿಯಾ, ಜಿಂಬಾಬ್ವೆಯ ಬೆಂಬಲ, ಅತ್ತ ರ್‍ವಾಂಡಾ ಮತ್ತು ಉಗಾಂಡದ ವಿರೋಧ. ಹಲವು ಪರಸ್ಪರ ಕಚ್ಚಾಡುವ ಭಾಷಣಗಳು ನಡೆದವು. ನಮೀಬಿಯಾದ ಅಧ್ಯಕ್ಷ ಸಾಮ್ ನಜೋಮಾ ತನ್ನ ಪಾಲಿನ ಭಾಷಣದ ಸಮಯವನ್ನು ಕಬೀಲಾಗೆ ಕೊಡಿಸಿದರು. ವಿಶ್ವ ಸಂಸ್ಥೆಯ ಪ್ರಧಾನ

"ಸಾಮ್ರಾಜ್ಯಶಾಹೀ ಹೊಸ ವಿಶ್ವವ್ಯವಸ್ಥೆ" ಗೆ ಅಲಿಪ್ತ ಆಂದೋಲನ ಸವಾಲೊಡ್ಡಬೇಕಾಗಿದೆ

- ಸೀತಾರಾಂ ಯೆಚೂರಿ

ಅಲಿಪ್ತ ಆಂದೋಲನದ ೧೨ನೇ ಶೃಂಗ ಸಮ್ಮೇಳನ ಇತ್ತೀಚೆಗೆ ದರ್ಬಾನ್‌ನಲ್ಲಿ ನಡೆಯಿತು. ಬಹಳ ನಿರೀಕ್ಷೆ ಉಂಟುಮಾಡಿದ್ದ ಈ ಸಮ್ಮೇಳನ ಅವನ್ನು ಈಡೇರಿಸದಿದ್ದರೂ, ಈ ಶೃಂಗ ಸಮ್ಮೇಳನದ ಕಲಾಪಗಳು, ಮುಖ್ಯವಾಗಿ ಅಧ್ಯಕ್ಷ ಮಂಡೇಲಾರ ಆರಂಭಿಕ ಭಾಷಣ ಹೊಸ ದಿಕ್ಕು ಕಂಡುಕೊಳ್ಳುವ ಆಧಾರ ನಿರ್ಮಿಸಿದೆ ಎನ್ನುತ್ತಾರೆ ಸಿಪಿಐ(ಎಂ) ಮುಖಂಡ ಸೀತಾರಾಂ ಯೆಚೂರಿ.



ಕಾರ್ಯದರ್ಶಿಗಳು ಮಾತನಾಡುವಾಗ ಕಬೀಲಾ ಸಭಾಂಗಣದಿಂದ ಅವಮಾನ ಮಾಡುವ ರೀತಿಯಲ್ಲಿ ಹೊರ ಹೊರಟರು.

ಸೂಡಾನ್ ಮೇಲೆ ಅಮೇರಿಕನ್ ಕ್ಷಿಪಣಿ ಧಾಳಿ ಮತ್ತೆ ಕಲಾಪಗಳಲ್ಲಿ ಕೇಳಿಬಂತು. ಅಮೇರಿಕನ್ ಧಾಳಿಗಳ ನೇರ ಖಂಡನೆಯಾಗಬೇಕು ಎಂದು ಸೂಡಾನ್ ಬಯಸಿತ್ತು. ಇದು ಸಂಭವಿಸುವ ಹಾಗೂ ಇತ್ತು. ಆದರೆ ಅಲಪ್ತ ಆಂದೋಲನದ 'ಹಳೆ ಹುಲಿಗಳು' ಅಂದರೆ ಇಜಿಪ್ಟ್, ಭಾರತ, ಇಂಡೋನೇಶ್ಯಾ, ಇದನ್ನು ದುರ್ಬಲ ಗೊಳಿಸುವಂತೆ ನೋಡಿಕೊಂಡರು. ಸಾಮ್ರಾಜ್ಯಶಾಹಿಯನ್ನು ನೇರವಾಗಿ ಖಂಡಿಸುವವರೊಡನೆ ಕೈಜೋಡಿಸುವ ಬದಲು ಬಿ.ಜೆ.ಪಿ. ಸರಕಾರ ಒಂದು ಹೊಸ ಸಾಮ್ರಾಜ್ಯಶಾಹಿ-ಪರ ನಿಲುವು ಪ್ರದರ್ಶಿಸಿದ್ದು ನಾಚಿಕೆಗೇಡಿನ ಸಂಗತಿ. ನಿಜಸಂಗತಿಯೆಂದರೆ, ಭಾರತದ ಬದಲಾದ ಕಣ್ಣೋಟ ಈ ಸಮ್ಮೇಳನದ ಒಂದು ಮುಖ್ಯ ಅಂಶವಾಗಿತ್ತು. ಈ ಬಗ್ಗೆ ಟಿಪ್ಪಣಿ ಮಾಡುತ್ತಾ 'ದಿ ಹಿಂದೂ' ಪತ್ರಿಕೆ "ಅಲಿಪ್ತ ಆಂದೋಲನದ ಸ್ಥಾಪಕ-ಸದಸ್ಯನಾಗಿ ಭಾರತ ಒಂದೆಡೆ ಹೊಂದಿದ್ದ ಸರ್ವೋಚ್ಚ ಸ್ಥಾನ ಮಾನವನ್ನು ಸಂಪೂರ್ಣ ಬುಡಮೇಲು ಮಾಡಲಾಗಿದೆ... ಹಿಂದೆಂದೂ ಪ್ರಮುಖ ವೇದಿಕೆಯಲ್ಲಿ ಭಾರತದ ಪ್ರಧಾನಿಗಳ ಭಾಷಣವನ್ನು ಓದಲಾಗಿದೆ ಎಂದು ಪರಿಗಣಿಸಬೇಕು ಎಂಬ ಮಟ್ಟಕ್ಕೆ ಇಳಿದಿರಲಿಲ್ಲ" ಎಂದು ಖೇದ ವ್ಯಕ್ತಪಡಿಸಿದೆ. "ತಾನೇ ಸ್ಥಾಪಿಸಲು ನೆರವಾದ, ಪೋಷಿಸಿ ಬೆಳೆಸಿದ ಒಂದು ಸಂಘಟನೆಯ ಶೃಂಗ ಸಮ್ಮೇಳನದಲ್ಲಿ ಭಾರತ ಈ ರೀತಿ ಕೆಂಗೆಡುವಂತಾದದ್ದು ಮನಸ್ಸಿಗೆ ಇಮ್ಮಡಿ ಕಿರಿಕಿರಿಯುಂಟು ಮಾಡುವ ಅಂಶ" ಎಂದು ಅದು ಹೇಳಿದೆ.

ಆದರೆ ನೆಲ್ಸನ್ ಮಂಡೇಲಾ ತನ್ನ ಭಾಷಣದಲ್ಲಿ ಸಾಮ್ರಾಜ್ಯಶಾಹಿ ಹೇರಬಯಸುವ ಕಣ್ಣೋಟಕ್ಕೆ ಸಂಪೂರ್ಣ ವಿರುದ್ಧವಾದ ಒಂದು ಕಣ್ಣೋಟವನ್ನು ಅತ್ಯಂತ ಕಳಕಳಿಯಿಂದ ಮುಂದಿಟ್ಟರು(ಬಾಕ್ಸ್ ನೋಡಿ)

ಹೀಗೆ ವಿವಾದಾತ್ಮಕ ಕಲಾಪಗಳನ್ನು ಬದಿಗಿಟ್ಟು ಈ ಶೃಂಗ ಸಮ್ಮೇಳನ ಒಂದು ಹೆಚ್ಚಿನ ದಕ್ಷಿಣ-ದಕ್ಷಿಣ ಸಹಕಾರ (ಬಡದೇಶಗಳ ಸಹಕಾರ)ಕ್ಕೆ ಆಧಾರ ಒದಗಿಸುತ್ತದೆ. ಇದನ್ನು ಅನುಷ್ಠಾನಕ್ಕೆ ತರಲು ಅಲಿಪ್ತ ಆಂದೋಲನದ ಐಕ್ಯ ನಿರ್ಧಾರ ಅಗತ್ಯ. ಅಭಿವೃದ್ಧಿ ಹೊಂದಿದ ದೇಶಗಳ ಜಿ-8 ಗುಂಪಿಗೆ ಈ ಸಮ್ಮೇಳನದಲ್ಲಿ ವೀಕ್ಷಕರಾಗಿ ಭಾಗವಹಿಸಲು ಆಹ್ವಾನ ನೀಡಿದ್ದು ಈ ಆಂದೋಲನದಲ್ಲಿನ ಡೋಲಾಯಮಾನ ಸ್ಥಿತಿಯನ್ನು ಬಿಂಬಿಸಿದೆ. ಇನ್ನೂ ಮುಂದೆ ಇಂತಹ ಚಂಚಲತೆಗಳನ್ನು ಮೀರಿ ನಿಂತು ಅಲಿಪ್ತ ಆಂದೋಲನ ಮತ್ತೆ ತನ್ನ ದಿಕ್ಕು ಕಂಡುಕೊಳ್ಳುವಲ್ಲಿ ಯಶಸ್ವಿಯಾಗುವಂತೆ ನಾವು ಪ್ರಯತ್ನಿಸಬೇಕು.

ನಮ್ಮೀ ಜಗತ್ತನ್ನು ಹೊಸದಾಗಿಸೃಷ್ಟಿಸುವ ಸವಾಲನ್ನು ಸ್ವೀಕರಿಸುವ ಧೈರ್ಯ ತೋರೋಣ"

ದರ್ಬಾನಿನಲ್ಲಿ ಇತ್ತೀಚೆಗೆ ನಡೆದ ಹನ್ನೆರಡನೇ ಅಲಿಪ್ತ ಆಂದೋಲನದ ಶೃಂಗ ಸಮ್ಮೇಳನದಲ್ಲಿ ಅಧ್ಯಕ್ಷ ಸ್ಥಾನ ವಹಿಸಿಕೊಂಡ ದಕ್ಷಿಣ ಆಫ್ರಿಕಾದ ಅಧ್ಯಕ್ಷ ನೆಲ್ಸನ್ ಮಂಡೆಲಾರವರ ಭಾಷಣದಿಂದ ಆಯ್ದು ಅಂಶಗಳನ್ನು ಇಲ್ಲಿ ಕೊಡಲಾಗಿದೆ.

ನಾವು ನಮ್ಮೆಲ್ಲರ ಈ ಜಗತ್ತನ್ನು ಮತ್ತೆ ಹೊಸದಾಗಿ ಮಾಡಬೇಕಾಗಿದೆ. ನಮ್ಮೆಲ್ಲರ ಸುತ್ತ-ಮುತ್ತ ಕಾಣುವ ಈ ಹಿಂಸೆಯನ್ನು, ನಾವು ವಿಶೇಷ ಸವಲತ್ತು ಹೊಂದಿದ ಸ್ಥಾನಗಳಲ್ಲಿ ರುವವರಷ್ಟೇ ಮಾನವರಾದ ಜನಗಳ ವಿರುದ್ಧ ನಡೆಯುತ್ತಿರುವ ಈ ಹಿಂಸೆಯನ್ನು ಒಂದು ನಿರ್ಣಾಯಕ ಹಾಗೂ ನಿರಂತರ ರೀತಿಯಲ್ಲಿ ಖಂಡಿತಾ ಎದುರಿಸಲೇ ಬೇಕು.

ನಾನಿಲ್ಲಿ ಮಾತನ್ನಾಡುತ್ತಿರುವ ಹಿಂಸೆಯೆಂದರೆ ಜನಗಳನ್ನು ಕೊಲ್ಲುವ ಹಸಿವಿನ ಹಿಂಸೆ, ಜನಗಳನ್ನು ಕೊಲ್ಲುವ ವಸತಿ ಹೀನತೆಯ ಹಿಂಸೆ, ಜನಗಳನ್ನು ಕೊಲ್ಲುವ ನಿರುದ್ಯೋಗ ಹೀನತೆಯ ಹಿಂಸೆ, ಜನಗಳನ್ನು ಕೊಲ್ಲುವ ಮಲೇರಿಯಾ, ಹೆಚ್‌ಐವಿ/ಏಡ್ಸ್‌ಗಳ ಹಿಂಸೆ, ಜನಗಳನ್ನು ಕೊಲ್ಲುವ ಮಾದಕ ದ್ರವ್ಯಗಳ ವ್ಯಾಪಾರದ ಹಿಂಸೆ.

ನಾನು ಹೇಳುತ್ತಿರುವುದು ಅಭಿವೃದ್ಧಿ ಹೀನತೆಯಿಂದ ಮಾನವ ಬದುಕುಗಳ ಧ್ವಂಸದ ಬಗ್ಗೆ; ನಾವು ಪ್ರಮುಖರಾಗಿರುವ ಸಮಾಜಗಳಲ್ಲಿನ ಅತ್ಯಂತ ಬಡ ಜನಗಳು ಪರಸ್ಪರ ಕತ್ತಿ, ಬಂದೂಕುಗಳಿಂದ ಎರಗುತ್ತಿರುವ ಬಗ್ಗೆ, ಮಕ್ಕಳ ದುರುಪಯೋಗ, ಮಹಿಳೆಯರ ಮೇಲೆ ಬಲಾತ್ಕಾರ ಮತ್ತಿತರ ಅಪರಾಧಗಳನ್ನು ನಾವು ಕಾಣಬೇಕಾದ ಬಗ್ಗೆ, ಕೊಲೆ ಮಾಡುವವರು, ಲೂಟಿ ಮಾಡುವವರೇ ಅಭಿವೃದ್ಧಿ ಹೊಂದುವ ನಮ್ಮ ಸಮಾಜಗಳ ಬಗ್ಗೆ ನಾನು ಹೇಳುತ್ತಿದ್ದೇನೆ.

ನಾನು ಹೇಳುತ್ತಿರುವ ಹಿಂಸಾಚಾರ ಯುದ್ಧದ ಹಿಂಸಾಚಾರವೂ ಹೌದು - ಅದು ಕಾಂಗೋ ಪ್ರಜಾಸತ್ತಾತ್ಮಕ ಗಣತಂತ್ರದಲ್ಲಿರಬಹುದು ಅಥವಾ ಕೊಸಾವದಲ್ಲಿರಬಹುದು, ಅಫಘಾನಿಸ್ತಾನದಲ್ಲಿರಬಹುದು ಅಥವಾ ಶ್ರೀಲಂಕಾದಲ್ಲಿರಬಹುದು. ಸಾಮೂಹಿಕ ವಿನಾಶದ ಅಗಾಧ ಶಸ್ತ್ರಾಗಾರಗಳು ಅದರಲ್ಲೂ ಕೆಲವು ದೇಶಗಳ ಶಸ್ತ್ರಾಗಾರಗಳಲ್ಲಿರುವ ಪರಮಾಣು ಅಸ್ತ್ರಗಳು ಇಡೀ ಮಾನವ ಕುಲಕ್ಕೆ ಒಡ್ಡಿರುವ, ನಡುಕ ತರುವ ಬೆದರಿಕೆಗಳ ಬಗ್ಗೆ ನಾನು ಹೇಳುತ್ತಿದ್ದೇನೆ.

ನಿಜ ನಾನು ಯಾವ ಸಂಗತಿಯ ಬಗ್ಗೆ ಹೇಳುತ್ತಿದ್ದೇನೆ ಎಂದು ನೀವು ಗುರುತಿಸಿದ್ದೀರಿ. ನಾನು ಅಭಿವೃದ್ಧಿ ಮತ್ತು ಶಾಂತಿಯ ಅವಳಿ ಪ್ರಶ್ನೆಗಳ ಬಗ್ಗೆ ಹೇಳುತ್ತಿದ್ದೇನೆ. ಇವು ನಮ್ಮ ಆಂದೋಲನದ ಸ್ಥಾಪನೆಯಿಂದಲೂ ನಮ್ಮ ಕೇಂದ್ರ ಗುರಿಗಳಾಗಿರುವಂತವು. ಈಗಲೂ ನಮ್ಮ ಪ್ರಧಾನ ಸವಾಲುಗಳಾಗಿರುವಂತವು..................

★ ★ ★

ಇಂದು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಎದುರಿಸುವ ಅತ್ಯಂತ ತಕ್ಷಣದ ಸವಾಲುಗಳಲ್ಲಿ ಒಂದೆಂದರೆ ಅಸಹನೀಯ ಸಾಲದ ಹೊರೆಯನ್ನು ತೆಗೆದುಹಾಕುವುದು. ಈ ಬಗ್ಗೆ ಬಹಳಷ್ಟು ಹೇಳಿಯಾಗಿದೆ. ಈಗ ಬೇಕಾಗಿರುವುದು ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ದಕ್ಷಿಣದಲ್ಲಿ ಅವರ ಸಹಯೋಗಿಗಳಿಂದ ಕಾರ್ಯಾಚರಣೆ.

ಹೀಗೆ ನಮ್ಮ ಆಧುನಿಕ ಜಗತ್ತಿನ ಒಂದು ಪ್ರದೇಶದಲ್ಲಿ ವಿಪರೀತ ಸಂಪತ್ತು, ಅದರಿಂದಾಗಿಯೇ ಮತ್ತೊಂದೆಡೆ ಬಡತನದ ಸೃಷ್ಟಿ - ಈ ಒಂದು ಒಗಟನ್ನು ಬಿಡಿಸಬೇಕಾಗಿದೆ. ಜಗತ್ತಿನ ಒಂದು ಮೂಲೆಯಲ್ಲಿನ ಸಂಪತ್ತನ್ನು ರಕ್ಷಿಸಿಟ್ಟು ಇನ್ನೊಂದೆಡೆ ಅಭಾವ ರಾರಾಜಿಸುತ್ತಿರುವಾಗ ಇದು ಸಾಧ್ಯವೇ ಎಂಬ ಪ್ರಶ್ನೆಯೂ ಏಳುತ್ತದೆ. ಅಲಿಪ್ತ ಆಂದೋಲನದ ಅಭಿವೃದ್ಧಿ ಕಾರ್ಯಕ್ರಮ ಇಡೀ ಅಂತರ್‌ರಾಷ್ಟ್ರೀಯ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮವಾಗುವಂತೆ ಮಾಡಲು ಕ್ರಮ ಕೈಗೊಳ್ಳುವ ಸಮಯವೀಗ ಬಂದಿಲ್ಲವೇ ಎಂಬ ಪ್ರಶ್ನೆಯೂ ಏಳುತ್ತದೆ ....

★ ★ ★

...................ಜಾಗತೀಕರಣದ ಪ್ರಕ್ರಿಯೆ ನಮ್ಮ ಮೇಲೆ ಒಂದು ಸಾಂಪ್ರದಾಯಿಕ ಸಮಮನಸ್ಕತೆಯನ್ನು ಹೇರಿದೆ. ಅದೀಗ ಒಂದು ಫ್ಯಾಶನ್ ಕೂಡಾ ಆಗಿದೆ. ಇದರಿಂದಾಗಿ ಬಜೆಟ್ ಕೊರತೆಗಳು, ಹಣದುಬ್ಬರ ದರಗಳು, ಬಡ್ಡಿ ಮತ್ತು ವಿನಿಮಯ ದರಗಳು, ಬಂಡವಾಳದ ಚಲನೆ, ಶ್ರಮ ಮಾರುಕಟ್ಟೆಗಳು, ಸಾಮಾಜಿಕ ಕಲ್ಯಾಣ ವ್ಯವಸ್ಥೆ ಸಾಧ್ಯವೇ ಇತ್ಯಾದಿ ಪ್ರಶ್ನೆಗಳನ್ನೇ ನಾವೆಲ್ಲಾ ಎದುರಿಸುವಂತಾಗಿದೆ.

ಈ ಎಲ್ಲಾ ಪದಗುಚ್ಛಗಳೇ ನಮ್ಮ ದೈನಂದಿನ ರಾಜಕೀಯ ಶಬ್ದಕೋಶದಲ್ಲಿ ಪ್ರಧಾನ ಸ್ಥಾನಗಳಿಸಿ ಈ ಎಲ್ಲದರ ಮೂಲೋದ್ದೇಶವನ್ನೇ ಮರೆಯುವಂತಾಗುವುದಿಲ್ಲವೇ? ಪ್ರತಿಯೊಬ್ಬ ನಾಗರಿಕನ ಭೌತಿಕ ಆಧ್ಯಾತ್ಮಿಕ ಪರಿಸ್ಥಿತಿಗಳಲ್ಲಿ ನಿರಂತರ ಉನ್ನತಿಯೇ ಇವೆಲ್ಲದರ ಉದ್ದೇಶ ಎಂಬುದನ್ನು ಮರೆಯುವಂತಾಗುವುದಿಲ್ಲವೇ?

'ಸಿದ್ಧಾಂತದ ಕೊನೆ' ಮುಂತಾದ ಪರಿಕಲ್ಪನೆಗಳು, ಉತ್ತರದ ದೇಶಗಳಲ್ಲಿ ರಾಜಕೀಯದ ಬಗ್ಗೆ ಜನಸಮೂಹಗಳ ನಿರ್ಲಕ್ಷ್ಯ, ಬೇಸರಿಕೆ ವಾಸ್ತವವಾಗಿ ಭ್ರಮನಿರಸನವನ್ನು ವ್ಯಕ್ತಗೊಳಿಸುತ್ತಿಲ್ಲವೇ?

ನಾನು ಹೇಳುತ್ತಿರುವ ಭ್ರಮನಿರಸನ ಎಲ್ಲೆಡೆ ಕಾಣುತ್ತಿರುವಂತದ್ದು, ಎಲ್ಲೆಡೆ ಮಾನವ ಮೌಲ್ಯಗಳಿಗೆ ಚುನಾವಣಾ ಸಮಯಗಳಲ್ಲಿ ಮಾತ್ರ ಪ್ರಾಧಾನ್ಯತೆ ಬರುತ್ತಿದೆ. ಇಲ್ಲವಾದರೆ ಈ ಮೌಲ್ಯಗಳು ಆರ್ಥಿಕ ಬೆಳವಣಿಗೆಯ ಪೌರುಷಮಯ ಜಗತ್ತಿನ ರಭಸದ ನಡಿಗೆಯಲ್ಲಿ, ಅಧಿಕಾರದ ಆಟಗಳ ತೀವ್ರ ಸೆಣಸಾಟದಲ್ಲಿ ಯಾರಿಗೂ ಬೇಡದ ಕಸದ ಬುಟ್ಟಿಗಳಲ್ಲಿ ಹಾರಾಡುತ್ತಿರುತ್ತವೆ. ವಾಸ್ತವವಾಗಿ ಈ ಮಾನವೀಯ ಮೌಲ್ಯಗಳನ್ನು ಗೌರವಿಸುವುದೇ ಎಲ್ಲಾ ರಾಜಕೀಯ ಗುರಿಯಾಗಿರ ಬೇಕಲ್ಲವೇ?....

★ ★ ★

...................ನಮ್ಮ ಕೊನೆಗಾಲದಲ್ಲಿ, ಒಂದು ಅಮಾನವೀಯ ಜಗತ್ತನ್ನು, ಮಾನವ ಘನತೆಯ; ಪರಿಕಲ್ಪನೆಯ ಮೇಲೆಯೇ ಒಂದು ನಿರಂತರ ಧಾಳಿಯನ್ನು ಎದುರಿಸಬೇಕಾದ ಸವಾಲಿನಿಂದ ಕೂಡಿದ ನಮ್ಮ ಮುನ್ನಡೆಯ ಹಾದಿಯ ಅಂತ್ಯದಲ್ಲಿ ಸಂಪನ್ನ ಸ್ಥಿತಿಯಲ್ಲಿರುವವರ ನಡುವೆ ಒಂದು ಗುಣಮಟ್ಟವನ್ನು ನಿರೀಕ್ಷಿಸುವ ಹಕ್ಕು ನಮಗಿದೆ ಎಂದು ನನಗನ್ನಿಸುತ್ತದೆ. ಆ ಗುಣವೆಂದರೆ ಪ್ರತಿಯೊಬ್ಬನೂ ತನ್ನದನ್ನು ನೋಡಿಕೊಂಡರೆ ಸಾಕು ಎಂಬ ಪರಿಕಲ್ಪನೆಯನ್ನು ತಿರಸ್ಕರಿಸುವ ಗುಣ. ಇದನ್ನು ನಾವು ನಿರೀಕ್ಷಿಸುತ್ತೇವೆ..........

★ ★ ★

...............ಕೋಟಿಗಟ್ಟಲೆ ಜನಗಳನ್ನು ಪ್ರತಿನಿಧಿಸುವ ಈ ಭವ್ಯ ಆಂದೋಲನ ಕೇವಲ ಮಾತಿನ ಮಂಟಪ, ವಿಶ್ವ ರಾಜಕೀಯದಲ್ಲಿ ಒಂದು ಅಸಂಗತಿ ಎಂದು ಚಿತ್ರಿಸಬಯಸುವ ಧಾಳಿಯನ್ನು ತನ್ನ ನಿಜ ಕೆಲಸದ ಮೂಲಕ ಅಲಿಪ್ತ ಆಂದೋಲನ ಸೋಲಿಸಬೇಕು...

★ ★ ★

.... ಈ ಶೃಂಗ ಸಮ್ಮೇಳನದಿಂದ ಮಾನವೀಯ ಜಗತ್ತಿನ ಕಣ್ಣೋಟ ಹೊಂದಿರುವವ ರೆಲ್ಲರೂ ಸ್ವೀಕರಿಸುವಂತಹ ಒಂದು ಸಂದೇಶ ಹೊಮ್ಮಬೇಕು. ಅಭಿವೃದ್ಧಿಯ ಸರಪಣಿಯಲ್ಲಿ ಅತೀ ದುರ್ಬಲ ಗೆಣಸು ಎನಿಸಿರುವ ಆಫ್ರಿಕಾವೇ ಈಗ ಬರಲೇ ಬೇಕಾಗಿರುವ ಹೊಸ ಜಗತ್ತಿನ ಒಂದು ಉದಾಹರಣೆಯಾಗುವಂತೆ ಮಾಡುವ ಸವಾಲಿಗೆ ಇಡೀವಿಶ್ವ ಸ್ಪಂದಿಸಬೇಕೆನ್ನುವ ಸಂದೇಶ ಹೊಮ್ಮಬೇಕು.

ಆ ಕಣ್ಣೋಟದಿಂದ ಸ್ಫೂರ್ತಿ ಪಡೆದು, ನಮ್ಮ ಜಗತ್ತಿನಲ್ಲಿನ ಅಡ್ಡಿ ಆತಂಕಗಳು, ಅವಕಾಶಗಳ ವಾಸ್ತವಾಂಶಗಳ ಜ್ಞಾನದೊಂದಿಗೆ, ಬದಲಿಸಲು ಸಾಧ್ಯವಾದಂತಹ ಒಂದು ಹಣೆಬರಹ ಹೊಂದಿರುವ ಅನಾಥರ ಕೂಗುಗಳ ಒತ್ತಡದಿಂದ ನಮ್ಮೀ ಜಗತ್ತನ್ನು ಹೊಸದಾಗಿ ಸೃಷ್ಟಿಸುವ ಸವಾಲನ್ನು ಸ್ವೀಕರಿಸುವ ಧೈರ್ಯ ತೋರೋಣ.

ನಾವಿಂದು ಕೊಡುವ ಉತ್ತರಗಳು ತಪ್ಪೆಂದು ಸಿದ್ಧವಾದರೆ, ಆದ್ದರಿಂದ ಮುಂದೆ ಸಮಯವೇ ಅದನ್ನು ಸರಿಪಡಿಸಿದರೆ ಅದರಿಂದೇನು ಬಾಧಕವಿಲ್ಲ. ನಾವು ಪ್ರಯತ್ನ ನಡೆಸಿದ್ದರಿಂದ ಎಡವಿದೆವು ಎಂದರೆ ಅದರಲ್ಲಿ ತಪ್ಪೇನಿಲ್ಲ.

ಆದರೆ ನಾವು ಪ್ರಯತ್ನಿಸದಿದ್ದರೆ ನಾವೊಂದು ಗಂಭೀರ ತಪ್ಪು ಮಾಡಿದಂತಾಗುತ್ತದೆ. ಅದನ್ನು ಸಮಯವೂ ಕ್ಷಮಿಸುವುದಿಲ್ಲ, ಜನಗಳೂ ಕ್ಷಮಿಸುವುದಿಲ್ಲ.

ಒಂದು ಉತ್ತಮ ಜಗತ್ತನ್ನು ರಚಿಸುವಲ್ಲಿ ಕಾಣಿಕೆ ನೀಡುವಲ್ಲಿ ನಾವು ನಮ್ಮ ಸಮಾನ ಗುರಿಯ ಯಶಸ್ಸಿನ ಕನಸ್ಸನ್ನು ಕಾಣುವಂತಾಗಲಿ ಎಂದು ನನ್ನ ಆಸೆ.

ನನಗಿಂತ ಬುದ್ಧಿವಂತನಾದ ಒಬ್ಬ ಹೇಳಿದಂತೆ ನಾವು ಕನಸು ಕಾಣುತ್ತಿದ್ದೇವೆ ಎಂದು ಕನಸು ಕಂಡಾಗ ಜಾಗೃತಿಯ ಕ್ಷಣ ಸಮೀಪಿಸಿದೆಯೆಂದೇ ಅರ್ಥ.

ದೇಶದೊಳಗೆ

ವಿಶ್ವ

ಗುಜರಾತ್ ಬಿ.ಜೆ.ಪಿ. ಸರಕಾರದ ಬಿಕ್ಕಟ್ಟು

ಮಹಾರಾಷ್ಟ್ರದ ಬಿ.ಜೆ.ಪಿ.-ಶಿವಸೇನೆ ಮೈತ್ರಿಕೂಟದ ಸರಕಾರ ಬಿಕ್ಕಟ್ಟಿನಿಂದ ತಾತ್ಕಾಲಿಕವಾಗಿ ಹೊರಬಂದ ಬೆನ್ನಲ್ಲೇ ಬಿ.ಜೆ.ಪಿ.ಯ ನಿದ್ದೆ ಕೆಡಿಸುವ ವಿದ್ಯಾಮಾನ ಗುಜರಾತಿನಲ್ಲಿ ನಡೆದಿದೆ. ಅಲ್ಲಿ ಸ್ವಂತವಾಗಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ನಡೆಸುತ್ತಿರುವ ಬಿ.ಜೆ.ಪಿ. ಸರಕಾರ ಅಂತರಿಕ ಜಗಳದಿಂದಾಗಿ ಬಿಕ್ಕಟ್ಟಿನ ಸುಳಿಗೆ ಸಿಲುಕಿದ್ದು ಈ ವರದಿಯನ್ನು ಸಿದ್ಧಪಡಿಸುವ ವೇಳೆಗೆ ಬಂದ ಮಾಹಿತಿಯಂತೆ ಸದ್ಯ ಸಮಸ್ಯೆಯಿಂದ ಪಾರಾಗಿದೆ.

ಮುಖ್ಯಮಂತ್ರಿ ಕೇಶುಭಾಯಿ ಪಟೇಲರ ನಂತರದ ಸ್ಥಾನದಲ್ಲಿರುವ ಕೈಗಾರಿಕಾ ಮಂತ್ರಿ [illegible] ಸಚಿವ ಸ್ಥಾನಕ್ಕೆ ರಾಜೀನಾಮೆ [illegible] ಬಿ.ಜೆ.ಪಿ. ಸಂಪುಟ [illegible] ಬಿಕ್ಕಟ್ಟಿಗೆ ಸಿಲುಕಿತ್ತು. [illegible] ರಾಜೀನಾಮೆ ನೀಡಲು [illegible] ಭಾರತೀಯ ಜನತಾ ಪಕ್ಷ ಹಾಗೂ ಸಂಘ ಪರಿವಾರದ ನಿಜವಾದ [illegible] ಬಯಲಿಗೆಳೆಯುವಂಥದ್ದಾಗಿದೆ.

[illegible] ಜಿಲ್ಲೆಯಾದ ಕಛ್‌ನಲ್ಲಿ [illegible] ಬೆಂಬಲಿಗರಾದ ಭಾವುಜೀ [illegible] ಅವರನ್ನು ಈಚೆಗೆ ಕೊಲೆ ಮಾಡಲಾಗಿತ್ತು. ಇದು ಸಂಘ ಪರಿವಾರದ [illegible] ಒಬ್ಬ ಬಿ.ಜೆ.ಪಿ. ಶಾಸಕನ ಬೆಂಬಲಿಗನ ಕೃತ್ಯ ಎಂಬುದು ಮೆಹ್ತಾರ ಆರೋಪ. ಹೀಗೆ ತನ್ನ ಕಟ್ಟಾ ಅನುಯಾಯಿಯ ಹತ್ಯೆಯಿಂದ ಕುಪಿತರಾದ ಮೆಹ್ತಾ ಸಂಪುಟದಿಂದ [illegible] ನಿರ್ಧರಿಸಿ ದರು. ಮೆಹ್ತಾರ ಅನೇಕ ಬೆಂಬಲಿಗ ಸಂಸತ್ ಸದಸ್ಯರೂ ರಾಜೀನಾಮೆ ನೀಡಲು ಯೋಚಿಸಿದ್ದರು.

ರಾಜಸ್ಥಾನ, ದೆಹಲಿ ಮತ್ತು ಮಧ್ಯಪ್ರದೇಶ ವಿಧಾನಸಭೆ ಚುನಾವಣೆಗಳು ನಡೆಯಬೇಕಿರುವ ಈ ಕಾಲ ಘಟ್ಟದಲ್ಲಿ ಗುಜರಾತಿನಲ್ಲಿ ಬಿಕ್ಕಟ್ಟು ಸ್ಫೋಟಗೊಂಡಿದ್ದು ಬಿ.ಜೆ.ಪಿ. ನಾಯಕರಿಗೆ ತಲೆನೋವು ತಂದಿತ್ತು.

ಹೀಗಾಗಿ [illegible] ನಾಯಕರಲ್ಲಿ ಒಬ್ಬರಾದ [illegible] ಗಾಂಧಿ ನಗರಕ್ಕೆ [illegible] ಗೊಳಿಸುವ ಪ್ರಯತ್ನ [illegible].

ಮೊದಮೊದಲು [illegible] ರಾಜೀನಾಮೆಗೆ ಅಂಟಿಕೊಂಡಿದ್ದ [illegible] ಅದನ್ನು ವಾಪಸು [illegible] ಒಪ್ಪಿದ್ದಾರೆ. ಇದರಿಂದಾಗಿ [illegible] ಶಮನ ಗೊಂಡಿದ್ದರೂ [illegible] ಮತ್ತೆ ಸ್ಫೋಟಿಸೀತು [illegible].

ಪ್ರತೀಕಾರದ ಹತ್ಯೆ

[illegible] ಕಾರವಾಗಿ ಒಬ್ಬರನ್ನು ಕೊಲೆ ಮಾಡಲಾಗಿದ್ದು ಈ ವಿದ್ಯಾಮಾನವೇ ಬಿಕ್ಕಟ್ಟು ಮತ್ತೊಮ್ಮೆ ಸ್ಫೋಟಿಸಲು ನಾಂದಿಯಾದೀತು ಎನ್ನಬಹುದು.

ರಾಜ್‌ಪೂತ್ ಜನಾಂಗಕ್ಕೆ ಸೇರಿದ ಭಾವುಜಿ ಜಡೇಜ ಅವರ ಕೊಲೆಗೆ ಸೇಡು ತೀರಿಸಿಕೊಳ್ಳಲು ಭಾನುಶಾಲಿ ಜನಾಂಗಕ್ಕೆ ಸೇರಿದ ವಣಿಕ ಕಾಂಜಿ ಧನ್‌ಜಿ ಭಾನುಶಾಲಿ ಅವರನ್ನು ಕಛ್ ಜಿಲ್ಲೆಯ ಬಬ್ಬರ್ ಗ್ರಾಮದಲ್ಲಿ ಕೊಲೆ ಮಾಡಲಾಗಿದೆ ಎಂದು ವರದಿಗಳು ತಿಳಿಸಿವೆ.

ಅಲ್ಪ ಬಹುಮತದ ಸರಕಾರವೇ ಇರಲಿ, ಭಾರೀ ಸ್ಪಷ್ಟ ಬಹುಮತದ ಸರಕಾರವೇ ಇರಲಿ ಬಿಕ್ಕಟ್ಟು ಬಿ.ಜೆ.ಪಿ. ಪರಿವಾರದ ಸರಕಾರಗಳ ಲಕ್ಷಣವಾಗಿ ಬಿಟ್ಟಿದೆ. ಬಿಕ್ಕಟ್ಟಿನ ಪರಿಹಾರಕ್ಕೆ ಈ ಮೈತ್ರಿಕೂಟದ ವೇಳೆ ವ್ಯಯವಾಗುತ್ತಿರುವುದನ್ನು ಕೇಂದ್ರದಲ್ಲಿ ಹಲವು ರಾಜ್ಯಗಳಲ್ಲಿ ನಾವು ಕಾಣುತ್ತಿದ್ದೇವೆ.

ಬಿಹಾರ ಒಡೆಯಲು ಲಾಲೂಪ್ರಸಾದ್ ವಿರೋಧ

ಬಿಹಾರವನ್ನು ಒಡೆದು ಪ್ರತ್ಯೇಕ ವನಾಂಚಲ ರಾಜ್ಯವನ್ನು ಸ್ಥಾಪಿಸಬೇಕೆಂಬ ಪ್ರಸ್ತಾಪವನ್ನು ಬಿಹಾರದ [illegible] ಮುಖ್ಯಮಂತ್ರಿ ಹಾಗೂ ರಾಷ್ಟ್ರೀಯ ಜನತಾ ದಳದ (ಆರ್.ಜೆ.ಡಿ.) ಅಧ್ಯಕ್ಷ ಲಾಲೂಪ್ರಸಾದ್ ಖಂಡತುಂಡವಾಗಿ ವಿರೋಧಿಸಿದ್ದಾರೆ.

ಸಂಕುಚಿತ ರಾಜಕೀಯ ಲಾಭವನ್ನು ಗಮನದಲ್ಲಿಟ್ಟುಕೊಂಡ [illegible] ಪ್ರತ್ಯೇಕತಾ ವಾದ ಪ್ರತಿಪಾದಿಸುವ, [illegible] ವೈಜ್ಞಾನಿಕ ಆಧಾರವಿಲ್ಲದೆ ರಾಜ್ಯಗಳನ್ನು [illegible] ಬಾರದು ಎಂದು ಸದಾ ಸಿ.ಪಿ.ಐ.(ಎಂ) [illegible] ನಿಲುವು ತಳೆದಿರುವುದನ್ನು ಇಲ್ಲಿ [illegible].

'ನಮ್ಮ ಸವಿ[illegible]ರವನ್ನು ಒಡೆಯಲು ಬಿಡುವುದಿಲ್ಲ. [illegible] ಹೆಣದ ಮೇಲಷ್ಟೆ ಆ ರೀತಿ [illegible]' ಎಂದು ಸೆಪ್ಟಂಬರ್ 14ರಂದು ಪಾಟ್ನಾದಲ್ಲಿ ಲಾಲೂ ಘೋಷಿಸಿದರು. ರಾಬ್ಡಿ[illegible] ನೇತೃತ್ವದ ಆರ್.ಜೆ.ಡಿ. ಸರಕಾರವನ್ನು ವಜಾ ಮಾಡ ಬೇಕೆಂದು ಒತ್ತಾಯಿಸು[illegible] ಬಿ.ಜೆ.ಪಿ.-ಸಮತಾ ಪಕ್ಷದ ಕೂಟದ [illegible]ಳಿಯನ್ನು ಕೇಂದ್ರೀಕರಿಸುವುದ[illegible]ರ ಈ ಘೋಷಣೆಯ ಉದ್ದೇಶ[illegible].

ವಾಸ್ತವವಾಗಿ, ವನಾಂಚಲ ರಾಜ್ಯ ರಚನೆಯ ಸಂಬಂಧ [illegible] ಸರಕಾರ ಈಗಾಗಲೇ ನಿರ್ಧಾರ ಕೈಗೊಂಡಿತ್ತು. ಆದರೆ ಆ ನಿರ್ಣಯವನ್ನು ಸರಕಾರ ಈಗ ವಾಪಸು ಪಡೆದಿದೆ. ಪ್ರತ್ಯೇ[illegible]ಚನೆಗೆ ಸಂಬಂಧಿಸಿದ ಕರಡ[illegible] ವಿಧಾನ ಸಭೆಯಲ್ಲಿ ಚರ್ಚೆಗೆ [illegible] ಕೇವಲ ನಾಲ್ಕು ದಿನಗಳ ಮುಂ[illegible] ಪಕ್ಷದ ನಿರ್ಧಾರವನ್ನು ಪ್ರಕಟಿ[illegible] ಜಗನ್ನಾಥ್ ಮಿಶ್ರ ಕರೆ [illegible] ಇದಕ್ಕೆ ಮುಂಚೆ, ಭಾರತೀಯ ಜನತಾ ಪಕ್ಷವನ್ನು ರಾಜಕೀಯ ಲಾಭಕ್ಕಾಗಿ ಬಿಹಾರವನ್ನು ವಿಭಜಿಸಲು ಕಾತುರದಿಂದಿದೆ ಎಂದು ರಾಜ್ಯದ ಮಾಜಿ ಮುಖ್ಯಮಂತ್ರಿ ಜಗನ್ನಾಥ್ ಮಿಶ್ರ ಕೇವಲ ಒಂದು ವಾರದ ಹಿಂದೆ ಹೇಳಿದ್ದರು. ಬಿ.ಜೆ.ಪಿ. ಈ ಪಿತೂರಿಯನ್ನು ಸೋಲಿಸುವಂತೆ ರಾಜ್ಯದ ಶಾಸಕಾಂಗ ಮತ್ತು ಸಂಸತ್ತಿಗೆ ಅವರು ಕರೆ ನೀಡಿದ್ದರು.

ಬೆಂಬಲ ವಾಪಸು

ಆರ್.ಜೆ.ಡಿ. ಸರಕಾರದ ಬದಲಾದ ನಿಲುವಿನ ಹಿನ್ನೆಲೆಯಲ್ಲಿ ರಾಬ್ಡಿ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಳ್ಳಲು ಜಾರ್ಖಂಡ್ ಮುಕ್ತಿ ಮೋರ್ಚಾ(ಸೊರೇನ್) ನಿರ್ಧರಿಸಿದೆ. ಇದು ನಿರೀಕ್ಷಿತವೇ ಆಗಿತ್ತು. ಮುಖ್ಯವಾಗಿ ಜಾರ್ಖಂಡ್(ವನಾಂಚಲ) ರಾಜ್ಯ ರಚನೆಯ ಬೇಡಿಕೆಯನ್ನೇ ಆಧಾರವಾಗಿಟ್ಟುಕೊಂಡು ಸರಕಾರಕ್ಕೆ ಅದು ಬೆಂಬಲ ನೀಡಿತ್ತು.

ಪ್ರತ್ಯೇಕ ರಾಜ್ಯ ರಚನೆಯ ಪ್ರಸ್ತಾಪಕ್ಕೆ ತನ್ನ ಬೆಂಬಲದಲ್ಲಿ ಬದಲಾವಣೆಯಿಲ್ಲ ಎಂದು ಕಾಂಗ್ರೆಸ್ ಕೂಡಾ ತಿಳಿಸಿದೆ. ಹೊರಗಿನಿಂದ ಬೆಂಬಲ ನೀಡುತ್ತಿರುವ ಅದು ಕೂಡ ಬೆಂಬಲ ವಾಪಸು ಪಡೆಯುವ ಸಂಭವವಿದೆ. ಇದರಿಂದಾಗಿ ರಾಬ್ಡಿದೇವಿ ಸರಕಾರ ಅಲ್ಪಮತಕ್ಕಿಳಿಯಲಿದೆ.

ಇದನ್ನೇ ಆಧಾರವಾಗಿಟ್ಟುಕೊಂಡು ರಾಜ್ಯದ ಆರ್.ಜೆ.ಡಿ. ಸರಕಾರವನ್ನು ಕೇಂದ್ರದ ಬಿ.ಜೆ.ಪಿ. ನೇತೃತ್ವದ ಸರಕಾರ ವಜಾ ಮಾಡಿ ತನ್ನ ಅಂಗಪಕ್ಷಗಳಾದ ಬಿ.ಜೆ.ಪಿ. ಮತ್ತು ಸಮತಾ ಪಕ್ಷದ 'ಬೇಡಿಕೆ'ಯನ್ನು ಈಡೇರಿಸುವ ಅಪಾಯವೂ ಇದೆ. ಈ ಅವಕಾಶಕ್ಕಾಗಿ ಅದು ಕಾಯುತ್ತಿದೆ.

ಬಿಹಾರದಲ್ಲಿ 356ನೇ ಕಲಮಿನ ಬಳಕೆ ಸರ್ವಾಧಿಕಾರಶಾಹೀ ಕ್ರಮವಾಗುತ್ತದೆ - ಸಿ.ಪಿ.ಐ.(ಎಂ) ವಿರೋಧ

ವಾಜಪೇಯಿ ಸರಕಾರ 356ನೇ ಕಲಮನ್ನು ಬಳಸಿ ಬಿಹಾರದ ರಾಜ್ಯ ಸರ್ಕಾರವನ್ನು ವಜಾ ಮಾಡಿ, ರಾಷ್ಟ್ರಪತಿ ಆಳ್ವಿಕೆ ಹೇರುವ ಯೋಚನೆ ಮಾಡುತ್ತಿದೆ. ರಾಜ್ಯದಲ್ಲಿನ ಬಿ.ಜೆ.ಪಿ.-ಸಮತಾ ಮೈತ್ರಿಕೂಟದ ಸಂಕುಚಿತ ರಾಜಕೀಯ ಹಿತಾಸಕ್ತಿಗಾಗಿ ಇದನ್ನು ಮಾಡಲಾಗುತ್ತಿದೆ. ಹಾಗೆ ಮಾಡಿದರೆ ಇದು ಸಂವಿಧಾನದ ಈ ಕಲಮಿನ ಸ್ವೇಚ್ಛಾಚಾರಿ ದುರುಪ ಯೋಗದ ಇನ್ನೊಂದು ಉದಾಹರಣೆ ಯಾಗುತ್ತದೆ ಎಂದು ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಎಚ್ಚರಿಸಿದೆ.

356ನೇ ಕಲಮಿನ ದುರುಪಯೋಗ ವನ್ನು ನಿಲ್ಲಿಸಬೇಕು ಎಂದು ಪ್ರತಿಜ್ಞೆ ಮಾಡಿರುವ ಬಿ.ಜೆ.ಪಿ. ಅಂತರ್-ರಾಜ್ಯ ಮಂಡಳಿಯಲ್ಲಿ ಈ ನಿಲುವು ತಳೆದಿತ್ತು. ಈಗ ತದ್ವಿರುದ್ಧವಾದ ನಿಲುವು ತೋರುತ್ತಿದೆ. ಪ್ರಧಾನ ಮಂತ್ರಿಗಳು ಒಂದು ಪತ್ರಿಕಾ ಸಮ್ಮೇಳನದಲ್ಲಿ ಸುಮಾರಾಗಿ ರಾಜ್ಯ ಸರ್ಕಾರವನ್ನು ಎಲ್ಲಾ ವಿಧಿ-ವಿಧಾನಗಳನ್ನು ಉಲ್ಲಂಘಿಸಿ ವಜಾ ಮಾಡುವ ತಮ್ಮ ಆಶಯವನ್ನು ಸಾರಿದ್ದಾರೆ.

ದೇಶದಲ್ಲಿ ಈಗ ಸ್ಫುಟಗೊಂಡಿರುವ ಒಂದು ಪ್ರಜಾಸತ್ತಾತ್ಮಕ ವಿಧಿಯೆಂದರೆ ವಿಧಾನ ಸಭೆಯಲ್ಲಿ ಬಹುಮತ ಇರುವವವರೆಗೆ ಯಾವುದೇ ಚುನಾಯಿತ ರಾಜ್ಯ ಸರ್ಕಾರವನ್ನು ವಜಾ ಮಾಡಲು ಕೇಂದ್ರ ಸರಕಾರ ಈ ಕಲಮನ್ನು ಬಳಸ ಬಾರದು ಎಂದು. ಇದಕ್ಕೆ ಏಕಮಾತ್ರ ಅಪವಾದವೆಂದರೆ ರಾಷ್ಟ್ರೀಯ ಐಕ್ಯತೆಗೆ ಒಂದು ಗಂಭೀರ ಬೆದರಿಕೆ ಬಂದಂತಹ ಸಂದರ್ಭ. ಸುಪ್ರೀಂ ಕೋರ್ಟ್ ಬೊಮ್ಮಾಯಿ ತೀರ್ಪಿನಲ್ಲಿ ಈ ವ್ಯಾಖ್ಯೆಯನ್ನು ಎತ್ತಿ ಹಿಡಿದಿದೆ.

ಸಿ.ಪಿ.ಐ.(ಎಂ) ರಾಬ್ಡಿದೇವಿ ಸರಕಾರದ ಹಲವು ಧೋರಣೆಗಳನ್ನು ವಿರೋಧಿಸುತ್ತಿದೆ. ಆದರೆ ಹದಗೆಡುತ್ತಿರುವ "ಕಾನೂನು-ವ್ಯವಸ್ಥೆ ಸನ್ನಿವೇಶ" 356ನೇ ಕಲಮನ್ನು ಬಳಸಲು ಆಧಾರ ವಾಗಲಾರದು. "ಈ ಮಾನದಂಡ ಬಳಸುವುದಾದರೆ ವಜಾ ಮಾಡುವ ಪಟ್ಟಿಯಲ್ಲಿ ಮೊದಲ ಅಭ್ಯರ್ಥಿಯೆಂದರೆ ಉತ್ತರ ಪ್ರದೇಶದ ಬಿ.ಜೆ.ಪಿ. ಸರಕಾರ" ಎಂದಿರುವ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ 356ನೇ ಕಲಮನ್ನು ದುರುಪಯೋಗ ಮಾಡುವ ಪ್ರಯತ್ನವನ್ನು ತಾನು ದೃಢವಾಗಿ ವಿರೋಧಿಸುವುದಾಗಿ ಹೇಳಿದೆ. ಬಿ.ಜೆ.ಪಿ. ನೇತೃತ್ವದ ಸರಕಾರ ಈ ಸರ್ವಾಧಿಕಾರಿ ನಿಲುವನ್ನು ವಿರೋಧಿ ಸಬೇಕು ಎಂದು ಎಲ್ಲಾ ಪ್ರಜಾಪ್ರಭುತ್ವ ವಾದಿ ವಿಭಾಗಗಳಿಗೆ ಹಾಗೂ ಪಕ್ಷಗಳಿಗೆ ಕರೆ ನೀಡಿದೆ.

ಮುಂಬಯಿ ಕೋ[illegible] ತಪ್ಪಿತಸ್ಥರಿಗೆ ಶಿಕ್ಷೆ ಆಗ್ರಹಿಸಿ ಧರಣಿ

[illegible] ಕೋಮುಗಲಭೆಗಳಿಗೆ [illegible] ಶ್ರೀಕೃಷ್ಣ ಆಯೋಗದ [illegible]ಗೊಳಿಸಲು ಹಾಗೂ [illegible] ಒತ್ತಾಯಿಸಿ ರಾಜಧಾನಿ [illegible] ಈಚೆಗೆ ನೂರಾರು [illegible] ನಡೆಸಿದರು. ಐ.ಟಿ.ಓ. ಚೌಕದಲ್ಲಿ ನಡೆದ ಧರಣಿಯಲ್ಲಿ ಹಲವು [illegible] ಪಾಲ್ಗೊಂಡಿದ್ದರು.

ಬೃಂದಾ ಕಾರಟ್ (ಎ.ಐ.ಡಿ. ಡಬ್ಲ್ಯೂ.ಎ) [illegible] ಖೇವನ್‌ಚಂದ್ [illegible] ಸುರೈಯಾ ದುರಾನಿ, [illegible] (ಎನ್.ಎಫ್.ಐ. [illegible]ನಿ(ಆಂಧ್ರ ವನಿತಾ [illegible] ಅಹ್ಮದಾಬಾದ್ ಗಾಂಧಿ [illegible] ರಂಜನಾ [illegible].ಸಿ.ಸಿ.) ಸುರೇಂದ್ರ [illegible], ಸಹಿಹಾ ಫರೂಕಿ, [illegible] ಅನೇಕರು ಧರಣಿ [illegible]ನಾಡಿದರು.

[illegible].ಎ., ಎ.ಐ. [illegible].ಡಬ್ಲ್ಯೂ.ಪಿ., [illegible].ಡಬ್ಲ್ಯೂ., [illegible] ಮತ್ತು ಇತರ ಅನೇಕ [illegible] ಧರಣಿ ಸತ್ಯಾಗ್ರಹವನ್ನು ಆಯೋಜಿಸಿದ್ದವು.

ಕೇಂದ್ರ[illegible]ದ ಮನವಿ ಪತ್ರ ಮ[illegible] ಧರಣಿಯ ಗೊತ್ತುವ[illegible] ಬಿಡುಗಡೆ ಮಾಡಿದ್ದ[illegible].

ಶ್ರೀ[illegible]ವರದಿಯನ್ನು ರಾಜಕೀಯ ಕಾರಣ[illegible] ತಿರಸ್ಕರಿಸಿದ ಮಹಾರಾಷ್ಟ್ರ [illegible]ನೆಯನ್ನು ಗೊತ್ತುವಳಿ [illegible]ಯೋಗದಿಂದ ಛೀಮಾರಿಗೆ ಒಳಗಾದ ಎಲ್ಲರನ್ನು ತಕ್ಷಣ ಬಂಧಿಸ[illegible] ಎಂದು ಆಗ್ರಹಿಸ[illegible].

ಆ[illegible]ರಸುಗಳ ಅನುಷ್ಠಾ[illegible]ಲು ಗೃಹ ಸಚಿವರ[illegible] ಎಂದೂ ಧರಣಿ [illegible]ರು.

[illegible]ಡೆದರು, ಪುಸ್ತಕಗಳನ್ನು ದೋಚಿದರು... ಯಾ[illegible] ಮಾಡಿದರು? [illegible]ರೇ? ಅಲ್ಲ; ಇನ್ನಾರು?...

[illegible]ಇನ್ನೊಮ್ಮೆ ತಮ್ಮ [illegible]ತನವನ್ನು ತೋರಿಸಿ[illegible] ಸುಬ್ರಹ್ಮಣ್ಯ ಭಾರತಿ [illegible] ನಡೆದ ಲೇಖಕರ ಸಮಾವೇಶ[illegible] ಶಕ್ತಿಗಳು ಬರಹಗಾರರ [illegible]ಗಿ, ದಾಂಧಲೆ ನಡೆಸಿವೆ.

ತಮಿಳುನಾಡು [illegible] ಲೇಖಕರ ಸಂಘ ಚೆನ್ನೈನಲ್ಲಿ [illegible]ವನ್ನು ಏರ್ಪಡಿಸಿತ್ತು. ಸಭಾಂಗ[illegible] ನುಗ್ಗಿದ 'ಹಿಂದೂ ಮಕ್ಕಳ್ [illegible]' ಕೆಲವು ಕಾರ್ಯಕರ್ತರು [illegible] ಸಭೆಯನ್ನು ಉದ್ವಸ್ತಗೊಳಿಸಿದರು. ಲೆನಿನ್, ಡಾ|| ಬಿ.ಆರ್. ಅಂಬೇಡ್ಕರ್, [illegible] ಇ.ವಿ. ರಾಮಸ್ವಾಮಿ ಮೊದ[illegible] ಬರೆದ ಪುಸ್ತಕಗಳನ್ನು ಹಾಳುಗೆಡವಿದರು.

ಹೀಗೆ ಅತಿಕ್ರಮ[illegible] ನುಗ್ಗಿದ ದುಷ್ಕರ್ಮಿಗಳು ಅಷ್ಟಕ್ಕೇ [illegible]ಲ್ಲ, ಅನೇಕ ಕವಿಗಳ ಸಹಿತ ಸಂಘ[illegible] ಸದಸ್ಯರ ಮೇಲೆ ಹಲ್ಲೆ ಮಾಡಿದರು. [illegible] 3000 ರೂಪಾಯಿ ಮೌಲ್ಯದ [illegible]ಗಳನ್ನು ಕಿತ್ತುಕೊಂಡು ಹೋದರು [illegible] ಲೇಖಕರ ಸಂಘ ತಿಳಿಸಿದೆ.

ನಾಸ್ತಿಕ ಹಾಗೂ ಕಮ್ಯುನಿಸ್ಟ್ ಸಾಹಿತ್ಯವನ್ನು ಸುಬ್ರಹ್ಮಣ್ಯ ಭಾರತಿ ಸ್ಮಾರಕದಲ್ಲಿ ಪ್ರದರ್ಶಿಸಿದ್ದಕ್ಕೆ ತಮ್ಮ ವಿರೋಧ ಎಂದು ಹಿಂದೂ ಮಕ್ಕಳ್ ಕಚ್ಚಿ ಹೇಳಿದೆ. ಆದರೆ ಪ್ರತಿಭಟನೆಯ ಮಾರ್ಗ ಇದಲ್ಲ ಎನ್ನುವುದನ್ನು ಅದು ತಿಳಿದುಕೊಳ್ಳಬೇಕು.

ಕಾರಣ ಸ್ಪಷ್ಟ

ಲೇಖಕರ ಸಂಘದ ಸಭೆಯ ಮೇಲೆ ಕೋಮುವಾದಿಗಳು ಆಕ್ರಮಣ ನಡೆಸಿದ್ದಕ್ಕೆ ಕಾರಣ ಸ್ಪಷ್ಟವಾಗಿದೆ.

ಅಯೋಧ್ಯೆಯಲ್ಲಿನ ವಿವಾದಾತ್ಮಕ ಕಟ್ಟಡವನ್ನು ನಾಶಪಡಿಸಿದ್ದರ ವಿರುದ್ಧ ದೃಢವಾದ ನಿಲುವನ್ನು ತೆಗೆದುಕೊಂಡಿದ್ದರಿಂದ ಲೇಖಕರ ಸಂಘದ ಮೇಲೆ ಕೋಮುವಾದಿ ಶಕ್ತಿಗಳು ಆಕ್ರಮಣ ನಡೆಸಿದೆ ಎಂದು ಈ ಪರಿಸ್ಥಿತಿಯನ್ನು ಖಂಡಿಸಿರುವ ಸಂಘ ಹೇಳಿದೆ. ಇದಕ್ಕೆ ಕಾರಣವಾದ ಕೋಮುವಾದಿ ಶಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ.

[illegible] ದೂರ ಕ್ರಮಿಸಿದ [illegible]

[illegible]ಗಳಲ್ಲೇ ಅತ್ಯಂತ [illegible]ಮೂಹಿಕ ಪ್ರಚಾರ [illegible]ದ ಚಟುವಟಿಕೆಯನ್ನು [illegible] ಘಟಕ ನಡೆಸಿತು. [illegible]ರಿಂದ 7 ರವರೆಗೆ [illegible] ಜಾಥಾಗಳು 9800 [illegible] ಕ್ರಮಿಸಿದವು. ಈ [illegible] ಸಭೆಗಳನ್ನು [illegible] ಕೋಮುವಾದ, [illegible], ನೆರೆ ಪರಿಹಾರ [illegible]ಗಳಲ್ಲಿ ಜನರನ್ನು ಅಣಿನೆರೆ[illegible]ದಿಂದ ಜಾಥಾಗಳನ್ನು [illegible].

ಸಪ್ಟಂಬರ್ [illegible]ಲಿಯಲ್ಲಿ ಬಿಹಾರದ[illegible] ಜನರು ಪಾಲ್ಗೊಳ್ಳು[illegible]ಸುವುದು ಉದ್ದೇಶ[illegible].

ರಾಜ್[illegible]ಗಳನ್ನಾಗಿ ವಿಭಜಿಸಿ[illegible]ವನ್ನು ನಡೆಸಲಾ[illegible](ಎಂ), ಸಿ.ಐ.ಟಿ.ಯು[illegible]ಸಂಘಟನೆ, ಡಿ.ವೈ.ಎಫ್[illegible] ಜಾಥಾಗಳ ನೇತೃತ್ವ ವಹಿ[illegible].

[illegible]ಎಲ್. ಔಷಧಿ [illegible]ನ್ನು ಪುನಶ್ಚೇತನ[illegible]" [illegible] ಮಂತ್ರಾಲಯದ[illegible] ಕಾರ್ಮಿಕರ ಮತ ಪ್ರದರ್ಶನ

[illegible]ದ ಭಾರತ ಔಷಧಿ [illegible](ಐ.ಡಿ.ಪಿ.ಎಲ್.)ನ ಸುಮಾರು 1000 [illegible]ರ್ಮಿಕರು ಸಪ್ಟಂಬರ್ 9 ರಂದು [illegible] ಶಾಸ್ತ್ರೀ ಭವನದಲ್ಲಿರುವ [illegible] ಮತ್ತು ರಸಗೊಬ್ಬರ [illegible]ಮಂತ್ರಾಲಯದ ಆವರಣದಲ್ಲಿ ಧರಣಿ [illegible]. [illegible] ಎಲ್ಲಾ 5 ಘಟಕಗಳಿಂದ [illegible] ಹೈದರಾಬಾದ್, ಋಷಿಕೇಶ, [illegible], [illegible] ಮತ್ತು ಮುಝಫರ್‌ಪುರ್[illegible]ದ ಬಂದ ಕಾರ್ಮಿಕರು, ಮಾರುಕಟ್ಟೆ ವಿಭಾಗದ [illegible] ಪಾಟ್ನ, ಮದ್ರಾಸ್ ಮತ್ತಿತರ ಸ್ಥಳಗಳಿಂದ ಬಂದ ಮೆಡಿಕಲ್ ರೆಪ್ರೆಸೆಂಟೇಟಿವ್‌ಗಳು ಇದರಲ್ಲಿ ಭಾಗವಹಿಸಿದ್ದರು. ಮತ ಪ್ರದರ್ಶನದಲ್ಲಿ ಅರ್ಧದಷ್ಟು ಗುರ್ಗಾಂವ್‌ನಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಕಾರ್ಮಿಕರು, ವೈದ್ಯಕೀಯ ಪ್ರತಿನಿಧಿಗಳು, ಸೂಪರ್‌ವೈಸರುಗಳು, ಅಧಿಕಾರಿಗಳು ಮತ್ತು ತಂತ್ರಜ್ಞರು.

ಮತ ಪ್ರದರ್ಶನಕಾರರು ಧರಣಿ ನಡೆಸಿ ಮಂತ್ರಾಲಯದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳ ಪ್ರವೇಶವನ್ನು ತಡೆದರು. ಐ.ಡಿ.ಪಿ.ಎಲ್.ನ್ನು ತಕ್ಷಣ ಪುನಶ್ಚೇತನಗೊಳಿಸಬೇಕು ಎಂಬುದು ಅವರ ಏಕಮಾತ್ರ ಬೇಡಿಕೆಯಾಗಿತ್ತು.

ಇದಕ್ಕೆ ಮೊದಲು ಹಲವು ಬಾರಿ ಕೇಂದ್ರ ಕಾರ್ಮಿಕ ಸಂಘಗಳು, ಐ.ಡಿ.ಪಿ.ಎಲ್. ಸಂಘಗಳು ಹಾಗೂ ಹಲವು ಸಂಸತ್ ಸದಸ್ಯರ ಜಂಟಿ ನಿಯೋಗಗಳು ರಸಾಯನಿಕಗಳ ಮಂತ್ರಿ ಎಸ್.ಎಸ್.ಬರ್ನಾಲಾರನ್ನು ಭೇಟಿ ಮಾಡಿದ್ದವು. ಮಂತ್ರಿಗಳು ಕಂಪನಿಯನ್ನು ಪುನಶ್ಚೇತನಗೊಳಿಸುವ ಭರವಸೆ ನೀಡಿದ್ದರು ಆದರೆ ಇವುಗಳನ್ನೆಲ್ಲಾ ಬದಿಗಿಟ್ಟು ಈಗ ಇದನ್ನು ಮುಚ್ಚುವ ವೆಚ್ಚವನ್ನು ಲೆಕ್ಕ ಹಾಕಲಾರಂಭಿಸಿದರು. ಪುನಶ್ಚೇತನಕ್ಕಿಂತ ಮುಚ್ಚುವ ಖರ್ಚು ಕಮ್ಮಿ ಎಂದು ಹೇಳಲಾರಂಭಿಸಿದರು. ಆದರೆ ಕಂಪನಿಯ ಮ್ಯಾನೇಜ್‌ಮೆಂಟ್ ಲೆಕ್ಕಾಚಾರ ತದ್ವಿರುದ್ಧವಾಗಿದೆ.

ಮಂತ್ರಾಲಯದ ಈ ಪ್ರಯತ್ನ ಕಂಪನಿಯ ಎಲ್ಲಾ ಘಟಕಗಳಲ್ಲಿ ಉದ್ರೇಕಕಾರಿ ಸನ್ನಿವೇಶ ಸೃಷ್ಟಿಸಿದೆ. ಧರಣಿಯನ್ನುದ್ದೇಶಿಸಿ ಎಲ್ಲಾ ಘಟಕಗಳ ಮುಖಂಡರು, ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಮಾತನಾಡಿದರು.

ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ ಡಾ|| ಎಂ.ಕೆ. ಪಂಧೆ, ಕಾರ್ಯದರ್ಶಿ ಪಿ.ಕೆ. ಗಂಗೂಲಿ, ಎ.ಐ.ಟಿ.ಯು.ಸಿ.ಯ ಡಿ.ಎಲ್. ಸಚ್‌ದೇವ್, ಎಸ್‌ಎನ್.ಠಾಕೂರ್, ಹೆಚ್.ಎಂ.ಎಸ್.ನ ಆರ್.ಎ. ಉತ್ತಮ್ ಹಾಗೂ ಸಂಸತ್ ಸದಸ್ಯ ಜಲಾಲುದ್ದೀನ್ ಅನ್ಸಾರಿ ಮಾತನಾಡಿದರು.

ಸಿಐಟಿಯು ಕಾರ್ಯದರ್ಶಿ ಪಿ.ಕೆ. ಗಂಗೂಲಿಯವರ ನೇತೃತ್ವದ ಒಂದು ನಿಯೋಗ ಮಂತ್ರಿಗಳನ್ನು ಭೇಟಿ ಮಾಡಿ ಕಂಪನಿಯನ್ನು ಪುನಶ್ಚೇತನಗೊಳಿಸಬೇಕೆಂದು ಮನವಿ ಪತ್ರವನ್ನು ಅರ್ಪಿಸಿದ ಮೇಲೆ ನಾಲ್ಕು ಗಂಟೆಗಳ ಧರಣಿಯನ್ನು ಹಿಂತೆಗೆದುಕೊಳ್ಳಲಾಯಿತು.

(ಐ.ಎನ್.ಎನ್.)

ಲೋಕಸಂಚಾರ

ಶರತ್ ಚಂದ್ರ

ಕೆನಡಾದ ಕ್ವೆಬೆಕ್ ಪ್ರಾಂತ್ಯದ ಪ್ರತ್ಯೇಕತಾವಾದ-ಸುಪ್ರೀಂ ಕೋರ್ಟ್ ತೀರ್ಪು

ಕೆನಡಾದಲ್ಲಿ ಪಶ್ಚಿಮ ಭಾಗದಲ್ಲಿರುವ ಫ್ರೆಂಚ್ ಮಾತನಾಡುವ ಕ್ವೆಬೆಕ್ ಪ್ರಾಂತ್ಯದಲ್ಲಿ (ಕೆನಡಾದ ಇತರ ಭಾಗಗಳಲ್ಲಿ ಇಂಗ್ಲಿಷ್ ಮಾತನಾಡುವವರು ಬಹುಸಂಖ್ಯಾತರು) ಆ ಪ್ರಾಂತ್ಯ ಕೆನಡಾದಿಂದ ಪ್ರತ್ಯೇಕವಾಗಿ ಸ್ವತಂತ್ರ ದೇಶವಾಗಬೇಕೆಂದು ವಾದಿಸುವ ಚಳುವಳಿ ಹಲವು ವರ್ಷಗಳಿಂದ ಇದೆ. ಕೆನಡಾದಲ್ಲಿ ಕ್ವೆಬೆಕ್ ಪ್ರಾಂತ್ಯದ ಪ್ರತ್ಯೇಕತಾ ಚಳುವಳಿ, ದೇಶದ ಮುಖ್ಯ ರಾಜಕೀಯ ಸಂವೈಧಾನಿಕ ಕಾನೂನಿನ ಪ್ರಶ್ನೆಯಾಗಿದೆ. ಇತ್ತೀಚೆಗೆ ಸುಪ್ರೀಂ ಕೋರ್ಟು ನೀಡಿದ ತೀರ್ಪು ಈ ಪ್ರಶ್ನೆಗೆ ಹೊಸ ತಿರುವು ನೀಡಿದೆ.

ಸುಪ್ರೀಂ ಕೋರ್ಟು ತನ್ನ ತೀರ್ಪಿನಲ್ಲಿ ಕ್ವೆಬೆಕ್ ಏಕ ಪಕ್ಷೀಯವಾಗಿ ಕೆನಡಾದಿಂದ ಪ್ರತ್ಯೇಕವಾಗುವ ನಿರ್ಧಾರ ತೆಗೆದುಕೊಳ್ಳಬಾರದು. ಆದರೆ ಕ್ವೆಬೆಕ್‌ನ ಬಹುಸಂಖ್ಯಾತ ಜನ ಕ್ವೆಬೆಕ್ ಪ್ರತ್ಯೇಕವಾಗುವುದನ್ನು ಬಯಸಿದರೆ, ಕೆನಡಾದ ಸಂವಿಧಾನ ಹಾಗೂ ಅಂತರ್ರಾಷ್ಟ್ರೀಯ ಕಾನೂನಿನ ಪ್ರಕಾರ ಕೆನಡಾದ ಫೆಡರಲ್ ಸರ್ಕಾರ ಹಾಗೂ ಇತರ ಪ್ರಾಂತ್ಯಗಳು ಮಾತುಕತೆ ನಡೆಸಿ ಒಪ್ಪಂದದ ಮೇಲೆ ಆಗಬೇಕು ಎಂದು ಹೇಳಿದೆ. ಈ ತೀರ್ಪನ್ನು ಕೆನಡಾದ ಆಳುವ ಪಕ್ಷ ಲಿಬರಲ್‌ಗಳು, ಕ್ವೆಬೆಕ್ ಪ್ರಾಂತ್ಯ ಆಳುತ್ತಿರುವ ಕ್ವೆಬೆಕ್ ರಾಷ್ಟ್ರೀಯ ಪಕ್ಷ ಎರಡೂ ತಮ್ಮ ನಿಲುವಿಗೆ ಜಯ ಎಂದು ಬಣ್ಣಿಸಿವೆ. ಕ್ವೆಬೆಕ್ ರಾಷ್ಟ್ರೀಯ ಪಕ್ಷ ಈ ತೀರ್ಪಿನ ಪ್ರಕಾರ ತತ್‌ಕ್ಷಣ ಕ್ವೆಬೆಕ್‌ನಲ್ಲಿ ಜನಮತ ಸಂಗ್ರಹ ನಡೆಸಬೇಕು ಜನಮತ ಸಂಗ್ರಹದಲ್ಲಿ ಪ್ರತ್ಯೇಕತೆಯನ್ನು ಅರ್ಧಕ್ಕಿಂತ ಹೆಚ್ಚು ಜನ ಬೆಂಬಲಿಸಿದರೆ, ಫೆಡರಲ್ ಸರ್ಕಾರ ಪ್ರತ್ಯೇಕತೆಗೆ ಒಪ್ಪಬೇಕು ಎಂದು ನಿರ್ವಚಿಸಿದೆ. ಆದರೆ ಲಿಬರಲ್ ಪಕ್ಷ ಜನಮತ ಸಂಗ್ರಹ ನಡೆದು ಕ್ವೆಬೆಕ್‌ನ ಜನ ಪ್ರತ್ಯೇಕತೆಗೆ ಒಲಿದರೂ ಫೆಡರಲ್ ಸರ್ಕಾರ ಮತ್ತು ಇತರ ರಾಜ್ಯಗಳು ಒಪ್ಪಿದರೆ ಮಾತ್ರ ಕ್ವೆಬೆಕ್ ಸ್ವತಂತ್ರವಾಗಬಹುದು ಎಂದು ನಿರ್ವಚಿಸಿದೆ. ಅಲ್ಲದೆ. ಜನಮತಸಂಗ್ರಹದಲ್ಲಿ ಸರಳ ಬಹುಮತ (ಶೇಕಡಾ 50) ರ ಬದಲು ಪ್ರತೇಕವಾಗಲು ಕನಿಷ್ಟ ಶೇ.60 ಜನ ಒಪ್ಪಬೇಕು ಎಂದು ಹೇಳುತ್ತಿದೆ. ಕ್ವೆಬೆಕ್ ಪ್ರತ್ಯೇಕವಾದಿಗಳು ಕ್ವೆಬೆಕ್‌ನ ಇಂಗ್ಲೀಷ್ ಮಾತನಾಡುವ ಅಲ್ಪಸಂಖ್ಯಾತರು ಭಾಗವಹಿಸಬಾರದು ಎಂದು ಹೇಳಿ ಹೊಸ ಅರ್ಥ ಕೊಡಲು ಯತ್ನಿಸುತ್ತಿದ್ದಾರೆ. ಹೀಗೆ ಸುಪ್ರೀಂ ಕೋರ್ಟಿನ ತೀರ್ಪು ವಿಷಯ ತಿಳಿಯಾಗಿಸುವ ಬದಲು ಗೊಂದಲವನ್ನು ಹೆಚ್ಚು ಮಾಡಿದೆ. ಕ್ವೆಬೆಕ್‌ನ ಭವಿಷ್ಯದ ಬಗ್ಗೆ ತೀವ್ರ ಚರ್ಚೆಗೆ ಎಡೆಮಾಡಿದೆ.

1980 ರಲ್ಲಿ ನಡೆದ ಜನಮತ ಸಂಗ್ರಹದಲ್ಲಿ ಕ್ವೆಬೆಕ್ ಪ್ರತ್ಯೇಕ ದೇಶವಾಗುವುದಕ್ಕೆ ಶೇಕಡಾ 40 ಜನ ಬೆಂಬಲ ನೀಡಿದರೆ, 1995ರಲ್ಲಿ ಶೇಕಡಾ 49.4 ಜನ ಬೆಂಬಲ ನೀಡಿದ್ದಾರೆ. ಈಗ ಜನಮತ ಸಂಗ್ರಹ ನಡೆದರೆ ಕ್ವೆಬೆಕ್‌ಗೆ ಬೆಂಬಲ ಶೇಕಡಾ 50 ದಾಟುವ ಸಾಧ್ಯತೆ ಇದೆ.

‘ಆಸ್ಟ್ರೇಲಿಯಾ - ಬಿಳಿಯರಿಗಾಗಿ ಮಾತ್ರವೇ?’

ಈ ಪ್ರಶ್ನೆ ಆಸ್ಟ್ರೇಲಿಯಾದಲ್ಲಿ ಸಧ್ಯದಲ್ಲೇ ನಡೆಯಲಿರುವ ಚುನಾವಣೆಗಳಲ್ಲಿ ಆಸ್ಟ್ರೇಲಿಯಾದ ಜನರ ಮುಂದಿದೆ. 1996ರಲ್ಲಿ ನಡೆದ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದ ಲಿಬರಲ್ ಮತ್ತು ನೇಶನಲ್ ಪಾರ್ಟಿಗಳ ಕೂಟ ಪಾರ್ಲಿಮೆಂಟಿನಲ್ಲಿ ಬಹುಮತ ಪಡೆದಿದ್ದರೂ, ಮಧ್ಯಂತರ ಚುನಾವಣೆಗೆ ಶಿಫಾರಸು ಮಾಡಿತ್ತು. ಸರ್ಕಾರದ ಹಣಕಾಸು ಪ್ರಸ್ತಾಪಗಳಿಗೆ (ಸರಕು ಮತ್ತು ಸೇವೆಗಳ ಮೇಲೆ ತೆರಿಗೆ ಸೇರಿದಂತೆ) ಜನ ಬೆಂಬಲ ಪಡೆಯಲು ಈ ಚುನಾವಣೆ ಕರೆಯಲಾಗಿತ್ತು. ಆದರೆ ದೇಶದ ರಾಜಕೀಯದ ಕೆಲವು ಮೂಲಭೂತ ವಿಷಯಗಳು ಚುನಾವಣೆಯ ಪ್ರಧಾನ ವಿಷಯಗಳಾಗಲಿವೆ.

ಇದಕ್ಕೆ ಕಾರಣ ಪಾಲಿನ್ ಹನ್ಸನ್ ಎಂಬ ಪ್ರಸಕ್ತ ಪಾರ್ಲಿಮೆಂಟು ಸದಸ್ಯೆಯ ನಾಯಕತ್ವದ ‘ಒನ್ ನೇಶನ್ ಪಾರ್ಟಿ’ ಎಂಬ ಬಲ ಉಗ್ರಗಾಮಿ ಪಕ್ಷದ ಉದಯ ಹಾಗೂ ಅದು ಗಳಿಸುತ್ತಿರುವ ಜನಬೆಂಬಲ. ಈ ವರೆಗೆ ಒಂದು-ಎರಡು ಪಾರ್ಲಿಮೆಂಟು ಸದಸ್ಯರನ್ನು ಹೊಂದಿ ನಗಣ್ಯವಾಗಿದ್ದ ‘ಒನ್ ನೇಶನ್’ ಪಕ್ಷ ಆರ್ಥಿಕ ಬಿಕ್ಕಟ್ಟು, ನಿರುದ್ಯೋಗದಿಂದ ನರಳುತ್ತಿರುವ ಜನರನ್ನು ಹೊಸ ‘ಫ್ಯಾಸಿಸ್ಟ್-ಮಾದರಿ’ ‘ವರ್ಣ-ಜನಾಂಗ ದ್ವೇಷ’ ಘೋಷಣೆಗಳಿಂದ ಆಕರ್ಷಿಸುತ್ತಿದೆ.

ದೇಶಕ್ಕೆ ಬರುತ್ತಿರುವ ಏಶ್ಯನರ ವಲಸೆ ತಡೆಗಟ್ಟುವುದು, ಈಗಾಗಲೇ ವಲಸೆ ಬಂದಿರುವ ಏಶ್ಯನರನ್ನು ಹೊರಗಟ್ಟುವುದು, ಆಸ್ಟ್ರೇಲಿಯಾದ ಆದಿವಾಸಿಗಳಿಗೆ ಕೊಡುತ್ತಿರುವ ಮೀಸಲಾತಿ ಮುಂತಾದ ಸವಲತ್ತುಗಳನ್ನು ನಿಲ್ಲಿಸುವುದು, ‘ಆಸ್ಟ್ರೇಲಿಯಾ ಬಿಳಿಯರಿಗೆ ಮಾತ್ರ’ - ಇದು ಆ ಪಕ್ಷದ ಘೋಷಣೆಗಳು. ದಕ್ಷಿಣ ಪೂರ್ವ ಏಶ್ಯಾದ ಬಿಕ್ಕಟ್ಟು ಈ ದೇಶದ ಮೇಲೂ ಪ್ರಭಾವ ಬೀರಿದ್ದು, ಜಾಗತಿಕ ಆರ್ಥಿಕ-ಕುಸಿತದ ಆತಂಕದ ಹಿನ್ನೆಲೆಯಲ್ಲಿ ಈ ಘೋಷಣೆಗಳು ಆಸ್ಟ್ರೇಲಿಯಾದ ಜನತೆಯ ಗಣನೀಯ ಪ್ರಮಾಣದ ಜನರ ಮೇಲೆ ಪರಿಣಾಮ ಬೀರಲಿವೆ. ಪಾಲಿನ್‌ರ ‘ದ್ವೇಷ’ದ ಪ್ರಚಾರಕ್ಕೆ ಸಿಗುತ್ತಿರುವ ಸ್ಪಂದನ ಗಮನಿಸಿದರೆ ಮುಂದೆ ಯಾರು ಸರ್ಕಾರ ನಡೆಸುತ್ತಾರೆ ಎನ್ನುವುದನ್ನು ಆಕೆ ಮತ್ತು ಆಕೆಯ ‘ವರ್ಣ ಜನಾಂಗೀಯ ದ್ವೇಷ’ದ ಪಾರ್ಟಿ ನಿರ್ಧರಿಸಬಹುದು. ಈಗ ಇಂದಿನ ಸೂಚನೆಗಳ ಪ್ರಕಾರ ಈಗಿನ ಆಳುವ ಕೂಟ (ಲಿಬರಲ್ ಮತ್ತು ನೇಶನಲ್ ಪಕ್ಷಗಳು) ಅಥವಾ ಲೇಬರ್ ಒಂದೇ ಬಹುಮತ ಪಡೆಯುವ ಸಾಧ್ಯತೆ ಇಲ್ಲ. ಆದ್ದರಿಂದ ‘ಒನ್ ನೇಶನ್’ ಪಕ್ಷ ಸಾಕಷ್ಟು ಸೀಟುಗಳನ್ನು ಗಳಿಸಿದರೆ, ಎರಡು ಪ್ರಮುಖ ಪಕ್ಷಗಳು ಸರ್ಕಾರ ರಚಿಸಲು ‘ಒನ್ ನೇಶನ್’ ಮೇಲೆ ಅವಲಂಬಿಸಬೇಕಾಗಬಹುದು. ಇಡೀ ದೇಶದ ರಾಜಕೀಯವನ್ನೇ ಬದಲಾಯಿಸಬಹುದು ಎಂಬ ಆತಂಕ ಜನರನ್ನು ಕಾಡುತ್ತಿದೆ.

ಮಲೇಶ್ಯಾ ಉಪಪ್ರಧಾನಿ ವಜಾ

ಮಲೇಶ್ಯಾದ ಉಪಪ್ರಧಾನಿ ಹಾಗೂ ಯುನೈಟೆಡ್ ಮಲಯ ನೇಶನಲ್ ಆರ್ಗನೈಸೇಶನ್(ಯು.ಎಂ.ಎನ್.ಓ)ನ ಉಪಾಧ್ಯಕ್ಷ ಅನ್ವರ್ ಇಬ್ರಾಹಿಮ್‌ರನ್ನು ಎರಡೂ ಸ್ಥಾನಗಳಿಂದ ವಜಾ ಮಾಡಿದ ಬಗ್ಗೆ ಪ್ರಧಾನಿ ಡಾ|| ಮಹತೀರ್ ಮೊಹಮ್ಮದ್ ಪ್ರಕಟಿಸಿದ್ದಾರೆ. ಡಾ|| ಮಹತೀರ್ ಮೊಹಮ್ಮದ್ ಮಲೇಶ್ಯಾದಲ್ಲಿ ಮಾತ್ರವಲ್ಲ, ಮೂರನೇ ಜಗತ್ತಿನ ಹಲವಾರು ವೇದಿಕೆಗಳಲ್ಲಿ ಗೌರವಾನ್ವಿತ ವ್ಯಕ್ತಿ. ಜಾಗತೀಕರಣ ಮತ್ತು ನವ-ವಸಾಹತುವಾದದಿಂದ ಮುಕ್ತಿ ಬಗ್ಗೆ ಜಿಜ್ಞಾಸೆ ನಡೆಸಿದ, ಆ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳುವ ವ್ಯಕ್ತಿ. ಅನ್ವರ್ ಇಬ್ರಾಹಿಂ ಅವರಿಗೆ ಬಲಗೈಯಂತಿದ್ದು, ಮುಂದೆ ಅವರ ಪಾತ್ರ ವಹಿಸುತ್ತಾರೆ ಎಂಬ ಸುದ್ದಿ ಇತ್ತು. ಆ ಹಿನ್ನೆಲೆಯಲ್ಲಿ ಈ ವಜಾ ಆಶ್ಚರ್ಯ ತಂದಿದೆ.

ಅನ್ವರ್ ಇಬ್ರಾಹಿಂ ಅವರನ್ನು ಗೃಹ ಬಂಧನದಲ್ಲಿ ಇಡಲಾಗಿದೆ ಎಂಬ ವದಂತಿಯನ್ನು ಪ್ರಧಾನಿ ಅಲ್ಲಗಳೆದಿದ್ದಾರೆ. ಅನ್ವರ್ ಇಬ್ರಾಹಿಂ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿರುವುದರಿಂದ ಈ ಸುದ್ದಿ ನಿಜವಲ್ಲವೆನ್ನುವಂತಾಗಿದೆ. ಅನ್ವರ್ ಇಬ್ರಾಹಿಂ ಮೇಲೆ ‘ನೈತಿಕ ದುರ್ವರ್ತನೆ’ ಆಪಾದನೆ ಇರುವುದರಿಂದ ಅವರನ್ನು ವಜಾ ಮಾಡಲಾಗಿದೆ. ಇದಕ್ಕೆ ಪ್ರಧಾನಿ ಹಾಗೂ ಅವರ ನಡುವೆ ರಾಜಕೀಯ-ಆರ್ಥಿಕ ಕಣ್ಣೋಟದ ಬಗ್ಗೆ ಭಿನ್ನಾಭಿಪ್ರಾಯ ಅಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಆದರೆ ಮಲೇಶ್ಯಾದ ರಾಜಕೀಯ ವೀಕ್ಷಕರ ಪ್ರಕಾರ ರಾಜಕೀಯ-ಆರ್ಥಿಕ ಕಣ್ಣೋಟದ ಬಗ್ಗೆ ಭಿನ್ನಾಭಿಪ್ರಾಯಗಳೇ ಮುಖ್ಯ ಕಾರಣ. ಮಲೇಶ್ಯಾದ ಹೆಮ್ಮೆಯ ಘಟನೆಯಾದ, ಈಗ ಕೌಲಾಲಂಪುರ್‌ನಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಕ್ರೀಡೆಗಳ ನಂತರ ಅವರು ಅದನ್ನು ಬಹಿರಂಗಪಡಿಸುತ್ತಾರೆ ಎಂಬ ಅಭಿಪ್ರಾಯವಿದೆ.

ಸಿಟಿಬಿಟಿಗೆ ಸಹಿ ಹಾಕಲು ಪಾಕಿಸ್ತಾನಿ ವಿರೋಧ ಪಕ್ಷಗಳ ವಿರೋಧ

ಸಿಟಿಬಿಟಿ ಪಾಕಿಸ್ತಾನದಲ್ಲೂ ವಿವಾದಾಸ್ಪದ ವಿಷಯವಾಗಿದೆ. ಪ್ರಧಾನಿ ನವಾಜ್ ಶರೀಫರ ಸರ್ಕಾರ ಸಿಟಿಬಿಟಿಗೆ ಸಹಿ ಹಾಕಲು ಒಪ್ಪಿರುವುದನ್ನು ಪ್ರಮುಖ ವಿರೋಧ ಪಕ್ಷಗಳು ವಿರೋಧಿಸಿವೆ. ಸರ್ವ ಪಕ್ಷ ಅನುಮತಿ ಇಲ್ಲದೆ ಸಿಟಿಬಿಟಿಗೆ ಸಹಿ ಹಾಕಬಾರದು ಎಂದು ಅವು ಒತ್ತಾಯಿಸಿವೆ. ಸಿಟಿಬಿಟಿಗೆ ಸಹಿ ಹಾಕಲು ಯಾವ ಶರತ್ತುಗಳಿಗೆ ಒಪ್ಪಲಾಗಿದೆ ಎಂದು ಸರಕಾರ ಮುಕ್ತವಾಗಿ ಹೇಳಿಕೆ ಕೊಡಬೇಕು ಎಂದಿವೆ. ಈ ಒತ್ತಡದಿಂದ ಸಿಟಿಬಿಟಿ ಬಗ್ಗೆ ಚರ್ಚೆ ಮಾಡಲು ಪ್ರಧಾನಿ ಶರೀಫ್ ಪಾಕಿಸ್ತಾನಿ ಪಾರ್ಲಿಮೆಂಟಿನ ವಿಶೇಷ ಅಧಿವೇಶನ ಕರೆದಿದ್ದಾರೆ.

ಕಾಂಗೋ ಅಂತರ್ಯುದ್ಧ ನಿಲ್ಲಿಸಲು ಮಾತುಕತೆ

ಕಾಂಗೋದಲ್ಲಿ ಕಬಿಲಾರ ಸರ್ಕಾರದ ವಿರುದ್ಧ ಅಂತರ್ಯುದ್ಧ ನಿಲ್ಲಿಸಲು ಶಾಂತಿ ಮಾತುಕತೆಗಳಿಗೆ ಪ್ರಯತ್ನ ನಡೆಯುತ್ತಿದೆ. ಇತ್ತೀಚೆಗೆ ಜಿಂಬಾಬ್ವೆಯ ವಿಕ್ಟೋರಿಯಾ ಜಲಪಾತದ ಬಳಿ ಆರು ದೇಶಗಳ ಪ್ರಾದೇಶಿಕ ಶೃಂಗ ಸಭೆ ನಡೆಯಿತು. ಕಾಂಗೋ ಅಲ್ಲದೆ ಈ ಶೃಂಗ ಸಭೆಯಲ್ಲಿ ಜಿಂಬಾಬ್ವೆ, ಅಂಗೋಲಾ, ಜಾಂಬಿಯಾ, ಉಗಾಂಡಾ, ರ್‍ವಾಂಡಾ ಅಧ್ಯಕ್ಷರುಗಳು ಭಾಗವಹಿಸಿದ್ದರು. ಕಾಂಗೋದಲ್ಲಿ ಅಂತರ್ಯುದ್ಧ ಮುಂದುವರೆಯುತ್ತಿದ್ದು, ದಂಗೆಕೋರರಿಗೆ ಉಗಾಂಡಾ ಮತ್ತು ರ್‍ವಾಂಡಾ ಬೆಂಬಲ ನೀಡುತ್ತಿವೆ. ಆ ದೇಶಗಳ ಸೈನಿಕರೂ ಯುದ್ಧದಲ್ಲಿ ತೊಡಗಿದ್ದಾರೆ ಎನ್ನುವ ಕಾಂಗೋ ಆಪಾದನೆಯನ್ನು ಅವು ಅಲ್ಲಗಳೆದಿವೆ. ಕಾಂಗೋದ ಕಬೀಲಾ ಸರ್ಕಾರಕ್ಕೆ ಜಿಂಬಾಬ್ವೆ, ಅಂಗೋಲಾ, ಜಾಂಬಿಯಾಗಳು ಬೆಂಬಲ ನೀಡುತ್ತಿವೆ.

ಈ ಶೃಂಗಸಭೆಯಲ್ಲಿ ಕದನ ವಿರಾಮದ ಬಗ್ಗೆ ಸ್ಪಷ್ಟ ಒಪ್ಪಂದವಾಗದಿದ್ದರೂ, ಆ ಬಗ್ಗೆ ಮಾತುಕತೆಗಳು ಮುಂದುವರೆಯುವ ಸೂಚನೆ ಕಂಡು ಬಂತು.

ಪ್ರಿಮೊಕೋವ್ ರಶ್ಯನ್ ಪ್ರಧಾನಿ

ಯೆಲ್ಸಿನ್ ಎರಡು ಬಾರಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ರಂಗದಿಂದ ಅವಮಾನಕಾರಿ ಸೋಲಿನ ನಂತರ ಹಿಂಜರಿದರು. ರಶ್ಯನ್ ಪ್ರಧಾನಿಯನ್ನು ತಾನೇ ನಿರ್ಧರಿಸುವುದು ಎಂಬ ಹಠ ಬಿಟ್ಟು, ರಾಜಿ ಅಭ್ಯರ್ಥಿಗೆ ಒಪ್ಪಿ, ರಶ್ಯಾದ ರಾಜಕೀಯ-ಸಂವೈಧಾನಿಕ ಬಿಕ್ಕಟ್ಟು ಪರಿಹಾರವಾದಂತಾಗಿದೆ. ಸೋವಿಯೆಟ್ ಸರ್ಕಾರದಲ್ಲಿ ಗೋರ್ಬಚೇವ್‌ರಿಗೂ ಈಗಲೂ ವಿದೇಶ ಮಂತ್ರಿಯಾಗಿದ್ದ ಪ್ರಿಮೊಕೊವ್ ಆ ರಾಜಿ ಅಭ್ಯರ್ಥಿ. ಯೆಲ್ಸಿನ್ ಹಾಗೂ ಪಾರ್ಲಿಮೆಂಟಿನಲ್ಲಿ ಪ್ರತಿನಿಧಿತವಾದ ಪ್ರಮುಖ ಪಕ್ಷಗಳು ಅವರ ನಾಮಕರಣಕ್ಕೆ ಒಪ್ಪಿಕೊಂಡರು. ಡೂಮಾ ಸಹ ಅವರ ನೇಮಕವನ್ನು ಮಂಜೂರು ಮಾಡಿದೆ. ಪಾರ್ಲಿಮೆಂಟಿನ ಪ್ರಮುಖ ಪಕ್ಷಗಳನ್ನು ತನ್ನ ಮಂತ್ರಿ ಮಂಡಲದಲ್ಲಿ ತೆಗೆದುಕೊಳ್ಳುವುದಾಗಿ ಪ್ರಿಮೊಕೊವ್ ಹೇಳಿದ್ದಾರೆ.

ಅಧ್ಯಾಪಕರ ಮುಷ್ಕರಕ್ಕೆ ಜಯ: ಪ್ರಜಾಪ್ರಭುತ್ವ ಆಂದೋಲನಕ್ಕೊಂದು ಜಯ

ಅಖಿಲ ಭಾರತ ಕಾಲೇಜು ಮತ್ತು ವಿಶ್ವವಿದ್ಯಾಲಯ ಅಧ್ಯಾಪಕರ ಸಂಘಟನೆಗಳ ಒಕ್ಕೂಟ AIFUCTO - ನೇತೃತ್ವದಲ್ಲಿ ನಡೆದ ಅಧ್ಯಾಪಕರ 26 ದಿನಗಳ ಮುಷ್ಕರ ಯಶಸ್ವಿಯಾಗಿ ಕೊನೆಗೊಂಡಿದೆ. ಹಿಂದೆ ತಮ್ಮ ಕ್ಯಾಬಿನೆಟ್ ಸಹಯೋಗಿ ಸುಷ್ಮಾ ಸ್ವರಾಜ್ ಅಂಚೆ-ತಂತಿ ನೌಕರರನ್ನು ಬೆದರಿಸಿದಂತೆ ಮುರಳಿಮನೋಹರ ಜೋಶಿಯವರು ಅಧ್ಯಾಪಕರನ್ನು ಹೆದರಿಸಿದರು - ಮುಷ್ಕರ ಹಿಂತೆಗೆದುಕೊಳ್ಳದೆ ಮಾತುಕತೆಯಿಲ್ಲ ಎಂದರು. ನಂತರ ಅದೇ ಸುಷ್ಮಾ ಸ್ವರಾಜ್‌ರಂತೆ ಮಾತುಕತೆ ನಡೆಸಿದ ನಂತರವೇ ಮುಷ್ಕರ ನಿಂತಿತು. ಆಗಸ್ಟ್ 11 ರಂದು ಮುಷ್ಕರ ಆರಂಭವಾಗಿ ಸೆಪ್ಟೆಂಬರ್ 5 ರಂದು ಅದು ಮುಗಿಯುವ ವರೆಗೆ ಮು.ಮ.ಜೋಶಿಯವರ ಇಲಾಖೆಯ ಕಾರ್ಯದರ್ಶಿಗಳು AIFUCTO ಮುಖಂಡರೊಂದಿಗೆ ಐದು ಬಾರಿ ಮಾತುಕತೆ ನಡೆಸಿದರು. ಸೆಪ್ಟೆಂಬರ್ 5 ರಂದು ಕೂಡಾ ಸ್ವತಃ ಮಂತ್ರಿಗಳೇ AIFUCTO ಮುಖಂಡರನ್ನು ಭೇಟಿ ಮಾಡಿ ಲಿಖಿತ ಹೇಳಿಕೆ ನೀಡಿದ ಮೇಲೆಯೇ ಮುಷ್ಕರ ನಿಂತದ್ದು, ಬಿಜೆಪಿ ಮಂತ್ರಿಗಳ ದುಡಿಯುವ ಜನ-ವಿರೋಧಿ ಹಠಮಾರಿತನವನ್ನು ವಿಫಲಗೊಳಿಸಿದ್ದು ದುಡಿಯುವ ಜನ ಸಮೂಹಗಳ ಐಕ್ಯತೆ.

ಅದೇನೇ ಇರಲಿ, 26 ದಿನಗಳ ಈ ಮುಷ್ಕರದಲ್ಲಿ ದೇಶಾದ್ಯಂತ ನಾಲ್ಕು ಲಕ್ಷ ಅಧ್ಯಾಪಕರು ಹೋರಾಟದ ರಂಗಕ್ಕಿಳಿದಿದ್ದರು. ಇದು ಜಗತ್ತಿನಲ್ಲೇ ಬುದ್ಧಿಜೀವಿಗಳ ಅತೀ ದೊಡ್ಡ ಹೋರಾಟವೆಂದೆನಿಸಿದೆ. ಕರ್ನಾಟಕದಲ್ಲಿ ಮೊತ್ತಮೊದಲ ಬಾರಿಗೆ ಇಷ್ಟೊಂದು ವ್ಯಾಪಕವಾಗಿ ಅಧ್ಯಾಪಕರು ಮುಷ್ಕರದಲ್ಲಿ ಭಾಗವಹಿಸಿದರು. ಈ ಹಿಂದೆ 1987 ರಲ್ಲಿ ಅನಿರ್ದಿಷ್ಟ ಮುಷ್ಕರ ನಡೆದಿದ್ದಾಗ ಕರ್ನಾಟಕದಲ್ಲಿ ನಾಲ್ಕು ದಿನ ಮಾತ್ರ ಮುಷ್ಕರ ನಡೆದಿತ್ತು. ಬಿಜೆಪಿ ಮಂತ್ರಿಗಳು ಹಾಗೂ ಸಂಘ ಪರಿವಾರದ ಭಾಗವಾಗಿ ಎಬಿವಿಪಿ ಪ್ರಚಾರ ಮಾಡಿದಂತೆ ಅಧ್ಯಾಪಕರು ಇದಕ್ಕಿದ್ದಂತೆಯೇನೂ ಮುಷ್ಕರ ನಡೆಸಲಿಲ್ಲ. ಕಳೆದ ಅಕ್ಟೋಬರ್ ತಿಂಗಳಿಂದ ತಮಗಾಗಿರುವ ಅನ್ಯಾಯಗಳ ಬಗ್ಗೆ ಸರಕಾರದ ಗಮನವನ್ನು ಪ್ರತಿಭಟನೆ, ರ್‍ಯಾಲಿಗಳ ಮೂಲಕ ಸೆಳೆಯಲು ಪ್ರಯತ್ನಿಸಿದ್ದರು.

ಇದು ರಾಜಕೀಯ ಪ್ರೇರಿತ ಮುಷ್ಕರ ಎಂದು ಹೇಳಿ ಸ್ವತಃ ಅಧ್ಯಾಪಕರೂ, ರಾಜಕಾರಣಿಯೂ ಆದ ಮು.ಮ.ಜೋಷಿಯವರು ಮತ್ತು ಎಬಿವಿಪಿ ಅಪಪ್ರಚಾರ ನಡೆಸಲು ಪ್ರಯತ್ನಿಸಿದರು. ಆದರೆ ಅಧ್ಯಾಪಕರ ಐಕ್ಯತೆಯನ್ನು ಮುರಿಯಲು ಅವರಿಗಾಗಲಿಲ್ಲ. ಏಕೆಂದರೆ ಕರ್ನಾಟಕದಲ್ಲಂತೂ ಹೀಗೆ ಈ ಮುಷ್ಕರ ರಾಜಕೀಯ ಪ್ರೇರಿತ ಎಂದ ಅಖಿಲ ಭಾರತ ಶಿಕ್ಷಣ ಮಹಾ ಸಂಘದ ಅಧ್ಯಕ್ಷರೆನಿಸಿಕೊಂಡವರು ಬಿಜೆಪಿ ಕಛೇರಿಯಿಂದಲೇ ಹೇಳಿಕೆ ನೀಡುತ್ತಿದ್ದದು ಯಾರಿಗೂ ತಿಳಿಯದ ಸಂಗತಿಯೇನಲ್ಲ. ಎಬಿವಿಪಿ ಕೂಡಾ ಆರಂಭದಲ್ಲಿ ಈ ಮುಷ್ಕರಕ್ಕೆ ಬೆಂಬಲ ನೀಡಿ ತಮ್ಮ ರಾಜಕೀಯ ಗುರುಗಳ ಒತ್ತಡದಿಂದಾಗಿ ಬೆಂಬಲವನ್ನು ತಿರುಗುಮುರುಗುಗೊಳಿಸಿದ್ದು ಗುಟ್ಟಾಗಿಯೇನೂ ಉಳಿಯಲಿಲ್ಲ.

ಅಧ್ಯಾಪಕರು ಮತ್ತು ಕೇಂದ್ರ ಸೇವೆಗಳಲ್ಲಿನ ಮೊದಲ ದರ್ಜೆ ಅಧಿಕಾರಿಗಳ ನಡುವೆ ವೇತನ ಸಮಾನತೆ ಬರುವಂತೆ ಅಧ್ಯಾಪಕರುಗಳ ವೇತನ ಶ್ರೇಣಿಗಳಲ್ಲಿ, ಇಂಕ್ರಿಮೆಂಟ್‌ಗಳಲ್ಲಿ, ಭಡ್ತಿ ಅವಕಾಶಗಳಲ್ಲಿ ಹೆಚ್ಚಳ, ಈ ಪರಿಷ್ಕೃತ ವೇತನ ಶ್ರೇಣಿಗಳು ದೇಶಾದ್ಯಂತ ಏಕಕಾಲದಲ್ಲಿ ಜಾರಿಗೆ ಬರುವಂತೆ ಕೇಂದ್ರದಿಂದ ರಾಜ್ಯ ಸರಕಾರಗಳಿಗೆ ಹಣಕಾಸು ಬೆಂಬಲ ಹಾಗೂ ಮುಂಬಡ್ತಿಗೆ ಸೂಪರ್ ಸೆಲೆಕ್ಷನ್ ಗ್ರೇಡ್ ಇವು ಅಧ್ಯಾಪಕರ ಪ್ರಮುಖ ಬೇಡಿಕೆಗಳಾಗಿದ್ದವು. ಇವು ಮೂರರಲ್ಲೂ ಅಧ್ಯಾಪಕರು ಈ ಮುಷ್ಕರದಿಂದ ಗಮನಾರ್ಹ ಮುನ್ನಡೆ ಗಳಿಸಿದ್ದಾರೆ. ಇದರಿಂದ ಅಧ್ಯಾಪಕ ವೃತ್ತಿ ಹೊಸಬರಿಗೆ ಒಂದು ಆಕರ್ಷಕ ವೃತ್ತಿಯಾಗುವಂತಾಗಿದೆ.

ಇದಕ್ಕೂ ಮುಖ್ಯವಾಗಿ ನಾಲ್ಕು ಲಕ್ಷ ಅಧ್ಯಾಪಕರ ಈ ಯಶಸ್ವೀ ಮುಷ್ಕರದ ಸಾಧನೆಯೆಂದರೆ ಐಕ್ಯ ಹೋರಾಟ ಪರಿಣಾಮಕಾರಿಯಾಗಿರುತ್ತದೆ ಎಂಬ ವಿಶ್ವಾಸ ದುಡಿಯುವ ಜನಸಮೂಹಗಳಲ್ಲಿ ಮತ್ತೆ ಮೂಡುವಂತಾಗಿರುವುದು ಆ ದೃಷ್ಟಿಯಲ್ಲಿ ಇದು ದೇಶದ ಪ್ರಜಾಪ್ರಭುತ್ವ ಆಂದೋಲನಕ್ಕೊಂದು ಮಹತ್ವದ ವಿಜಯ.

ಎಂ.ಪಿ.ಎಂ.ಗೆ ಪರಿಸರವಾದಿಗಳ ಕಿರುಕುಳಕ್ಕೆ ಕಾರ್ಮಿಕರ ವಿರೋಧ

ಭದ್ರಾವತಿಯ ಮೈಸೂರು ಕಾರ್ಖಾನೆಯು ನಡುತೋಪು ಬೆಳೆಸಲು ಹಾಗೂ ‘ಕಡಿತಲೆ’ ಮಾಡಲು ಪ್ರತಿಭಟನೆ ವಿರೋಧ ವ್ಯಕ್ತ ಪಡಿಸಿ ಮನ ಬಂದಂತೆ ಪತ್ರಿಕೆಗಳಿಗೆ ಹೇಳಿಕೆ ನೀಡಿ ಸಾರ್ವಜನಿಕರಿಗೆ ಪರಿಸರವಾದಿಗಳ ಹೆಸರಿನಲ್ಲಿ ತಪ್ಪುಮಾಹಿತಿ ನೀಡುತ್ತಿರುವುದಕ್ಕೆ ಎಂ.ಪಿ.ಎಂ. ಅರಣ್ಯ ನೌಕರರ ಸಂಘ (ಸಿಐಟಿಯು) ತೀವ್ರವಾಗಿ ಖಂಡಿಸಿದೆ.

25 ಸಾವಿರ ಕಾರ್ಮಿಕರಿರುವ ಸರಕಾರಿ ಸ್ವಾಮ್ಯದ ಸಾರ್ವಜನಿಕ ಸಂಸ್ಥೆಯೊಂದನ್ನು ಮುಚ್ಚಿಸಲೊರಟಿರುವ ಪರಿಸರವಾದಿಗಳಿಗೆ ಬಡತನ ನಿರುದ್ಯೋಗ ಒಂದು-ಎರಡು ಸಾವಿರ ವೇತನದಲ್ಲಿ ಜೀವನ ನಡೆಸಿ ಅನುಭವ ಇದೆಯೇ ಎಂದಿರುವ ಕಾರ್ಮಿಕ ಸಂಘವು 25 ಸಾವಿರ ಕಾರ್ಮಿಕರನ್ನು ಬೀದಿ ಪಾಲು ಮಾಡಿ ಅವರನ್ನು ಶ್ರೀಮಂತರ ಜೀತದಾಳುಗಳನ್ನಾಗಿಸಬೇಕೆಂಬ ಹುನ್ನಾರವೆಂದಿದೆ.

ಎಂ.ಪಿ.ಎಂ. ಅರಣ್ಯ ಇಲಾಖೆಯಲ್ಲಿ ಸಣ್ಣ ತಪ್ಪುಗಳಾಗುತ್ತಿರಬಹುದು ಅದನ್ನೆ ದೊಡ್ಡದು ಮಾಡಿ ಸಾವಿರಾರು ಕುಟುಂಬಗಳನ್ನು ಬೀದಿಪಾಲು ಮಾಡ ಹೊರಟಿರುವುದನ್ನು ಸಂಘವು ತೀವ್ರವಾಗಿ ಖಂಡಿಸಿದೆ.

ಮನು ಪ್ರತಿಮೆ ವಿರುದ್ಧ ಚಳವಳಿ

ಜಾತಿವಾದಿ ವ್ಯವಸ್ಥೆಯ ಸಿದ್ಧಾಂತಿ ಮನುವಿನ ಪ್ರತಿಮೆ ವಿರುದ್ಧ ಚಳುವಳಿ ನಡೆದಿದೆ. ರಾಜಸ್ಥಾನ ರಾಜಧಾನಿ ಜೈಪುರದಲಿ ಹೈಕೋರ್ಟ್ ಆವರಣದಲ್ಲಿರುವ ಮನು ಪ್ರತಿಮೆಯನ್ನು ತೆಗೆದುಹಾಕಬೇಕೆಂದು ಒತ್ತಾಯಿಸಿ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಸೆ.4 ರಂದು ಅಲ್ಲಿ ರ್‍ಯಾಲಿ ನಡೆಸಿತು.

ಮನು ಪ್ರತಿಪಾದಿಸಿದ ಜಾತಿ ಪದ್ಧತಿ ದಲಿತರ ಮತ್ತು ಸಮಾಜದ ಇತರ ಹಿಂದುಳಿದ ವಿಭಾಗಗಳ ವಿರುದ್ಧ ಶತಶತಮಾನಗಳಿಂದ ಅನ್ಯಾಯವೆಸಗಿದೆ ಎಂದು ರ್‍ಯಾಲಿಯಲ್ಲಿ ಮಾತನಾಡಿದ ಬಿ.ಎಸ್‌ಪಿ ಮುಖಂಡ ಕಾನ್ಶಿರಾಮ್ ಹೇಳಿದರು. ಮನು ಪ್ರತಿಮೆಯನ್ನು ನ್ಯಾಯದೇಗುಲದಿಂದ ತಕ್ಷಣವೇ ತೆಗೆದು ಹಾಕುವಂತೆ ಒತ್ತಾಯಿಸಿದರು.

ಕಾಮ್ರೇಡ್ ರಾಮಚಂದ್ರರಾವ್ ಲಾಲ್ ಸಲಾಂ!



"ಆಪ್ತ ಮಿತ್ರನನ್ನು ಕಳೆದುಕೊಂಡಿದ್ದೇವೆ"

ಕೃಷಿಕೂಲಿಕಾರರ ಸಂಘದ ಶ್ರದ್ಧಾಂಜಲಿ

ರೈತ ಸಂಘದ ನಾಯಕ ಹಾಗೂ ಸಿ.ಪಿ.ಐ.(ಎಂ)ನ ಕೇಂದ್ರ ಸಮಿತಿ ಸದಸ್ಯ ಪಿ.ರಾಮಚಂದ್ರರಾವ್‌ರವರ ಅಗಲಿಕೆ ರಾಜ್ಯದ ಕೃಷಿಕೂಲಿಕಾರರಿಗೆ ತುಂಬಲಾಗದ ನಷ್ಟ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘವು ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ.

ರೈತರನ್ನು ಸಂಘಟಿಸಿದರೆ ಮಾತ್ರ ಸಾಲದು ಅತ್ಯಂತ ಬಡಸ್ಥಿತಿಯಲ್ಲಿರುವ, ಅತ್ಯಂತ ತೀವ್ರ ಸಾಮಾಜಿಕ ದೌರ್ಜನ್ಯಕ್ಕೊಳಗಾಗಿರುವ ಕೃಷಿ ಕೂಲಿಕಾರರನ್ನು ಸಂಘಟಿಸುವುದು ಅವಶ್ಯಕ ಎಂದು ಭಾವಿಸಿ ರಾಜ್ಯದಲ್ಲಿ ಕೃಷಿ ಕೂಲಿಕಾರರ ಪ್ರತ್ಯೇಕ ಸಂಘಟನೆಯನ್ನು ಸ್ಥಾಪಿಸಲು ಒತ್ತಾಸೆಯಿತ್ತಿದ್ದರು. ಕೃಷಿಕೂಲಿಕಾರರಿಗೆ ರೈತರ ಸಹಾಯವನ್ನು, ಸಹಾನುಭೂತಿಯನ್ನು ಪಡೆಯುವುದಕ್ಕಾಗಿ ಈ ರೈತ ಸಂಘದ ಮುಂದಾಳು ಶ್ರಮಿಸುತ್ತಿದ್ದರು. ಕೂಲಿಕಾರರ ಹೋರಾಟಗಳನ್ನು ಬೆಳವಣಿಗೆಯನ್ನು ಕಂಡು ಸಂತಸ ವ್ಯಕ್ತಪಡಿಸುತ್ತಿದ್ದರು ಎಂದು ನೆನಪಿಸಿಕೊಂಡಿರುವ ಕೃಷಿಕೂಲಿಕಾರರ ಸಂಘ ಅತ್ಯಂತ ತೀವ್ರ ಬೆಲೆಯೇರಿಕೆಯ ಈ ದಿನಗಳಲ್ಲಿ ಕೂಲಿಕಾರರಿಗೆ ಸಿಗಬಹುದಾದ ಎಲ್ಲಾ ಸಹಾಯದ ಅಗತ್ಯವಿರುವ ಸಂದರ್ಭದಲ್ಲಿ ಇಂತಹ ಆಪ್ತ ಮಿತ್ರನನ್ನು, ಬೆಂಬಲಿಗನನ್ನು ಕಳೆದುಕೊಂಡು ಕೃಷಿಕೂಲಿಕಾರ ಜನತೆ ತಂಬುಲಾರದ ನಷ್ಟವನ್ನನು ಭವಿಸುತ್ತಿದ್ದಾರೆ ಎಂದು ತನ್ನ ಶ್ರದ್ಧಾಂಜಲಿ ಅರ್ಪಿಸಿದೆ.

ಸಂಘಟನೆಗಿಳಿಸಿ, ಚಳುವಳಿಗೆ ಅಣಿನೆರೆಸಿದ ಮಹಾ ಚೇತನ

ಕರ್ನಾಟಕ ಪ್ರಾಂತ ರೈತ ಸಂಘ ಶ್ರದ್ಧಾಂಜಲಿ

ವೃತ್ತಿಯಲ್ಲಿ ಶಿಕ್ಷಕರಾಗಿದ್ದು, ವೃತ್ತಿಯನ್ನು ತ್ಯಜಿಸಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಚು ಹಾಗೂ ಬೀಡಿ ಕಾರ್ಮಿಕರ ಸಮಸ್ಯೆಗಳ ನಿವಾರಣೆಗಾಗಿ ಕಾರ್ಮಿಕ ಸಂಘಟನೆ ಮಾಡುತ್ತಾ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್(ಸಿಐಟಿಯು) ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ, ಮಹತ್ವದ ಸ್ಥಾನದಲ್ಲಿದ್ದ "ಮಾಸ್ಟ್ರು" ಪ್ರಸಕ್ತ ರಾಜ್ಯದಲ್ಲಿರುವ ರೈತ ಸಂಘಟನೆಗಳಾವುವೂ ಅಂದು ಇಲ್ಲದಿದ್ದ ಸಂದರ್ಭದಲ್ಲಿ, ರೈತರ ಸಂಕಷ್ಟಗಳ ಬಗ್ಗೆ ಅತೀವ ಕಾಳಜಿಯಿಂದ ಕಾರ್ಮಿಕ ಸಂಘಟನೆಯ ಪ್ರಮುಖ ಜವಾಬ್ದಾರಿಯನ್ನು ಹೊತ್ತು ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸಿದ ಮಹಾನ್ ರೈತ ಮುಂದಾಳು ಎಂದು ಕರ್ನಾಟಕ ಪ್ರಾಂತ ರೈತ ಸಂಘ ತನ್ನ ಶ್ರದ್ಧಾಂಜಲಿಯಲ್ಲಿ ತಿಳಿಸಿದೆ.

ರಾಜ್ಯದ ಮೂಲೆ ಮೂಲೆಗಳಿಗೆ ಭೇಟಿ ನೀಡಿ ಹಳ್ಳಿಗಳಲ್ಲಿ ರೈತರೊಡನೆ ವಾಸ ಮಾಡಿ ರೈತ ಕಾರ್ಯಕರ್ತರನ್ನು ಹುರಿದುಂಬಿಸಿದವರು ಕಾಂ|| ಪಿ.ಆರ್. ರಾವ್. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಸುಧಾರಣೆ ಹಾಗೂ ಇತರೆ ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸಿದ ಕಾಂ|| ಪಿ.ರಾಮಚಂದ್ರರಾಯರು, ಪ್ರಗತಿಪರ ಭೂಸುಧಾರಣೆಗಾಗಿ ಒತ್ತಾಯಿಸುತ್ತಾ ದಿವಂಗತ ದೇವರಾಜ ಅರಸುರವರ ಭೂಸುಧಾರಣೆ ನೀತಿ ಪೊಳ್ಳುತನವನ್ನು ಬಯಲುಗೊಳಿಸಿದ ರೈತ ಮುಖಂಡರು. ಇವರು ರೈತ ಸಂಘದ ನೇತೃತ್ವ ವಹಿಸಿ ದುಡಿಯುತ್ತಿದ್ದಾಗಲೇ ರಾಜ್ಯದ ರೈತ ಚಳುವಳಿಯು ನರಗುಂದ-ನವಲಗುಂದ ರೈತ ಬಂಡಾಯದಿಂದ ಆರಂಭವಾಗಿ ರೈತ ಚಳುವಳಿಯ ಬೃಹತ್ ಅಲೆಯೊಂದು ಎದ್ದು ಬಂದಿತು. ಅಖಿಲ ಭಾರತ ಕಿಸಾನ್ ಸಭಾ(ಎ.ಐ.ಕೆ.ಎಸ್.)ದ ಕೇಂದ್ರೀಯ ಕಿಸಾನ್ ಸಮಿತಿ(ಸಿ.ಕೆ.ಸಿ.) ಸದಸ್ಯರಾಗಿ ಅನೇಕ ವರ್ಷಗಳ ಕಾಲ ತಮ್ಮ ಕೊಡುಗೆಯನ್ನು ದೇಶದ ರೈತ ಚಳುವಳಿಗೆ ನೀಡಿದ್ದಾರೆ.

ರೈತ-ಕಾರ್ಮಿಕರಲ್ಲಿ ಇನ್ನಿಲ್ಲದ ಉತ್ಸಾಹ ತುಂಬಿ ಸಂಘಟನೆಗಿಳಿಸಿ - ಚಳುವಳಿಗೆ ಅಣಿನೆರೆಸಿದ ಮಹಾನ್ ಚೇತನ ಇನ್ನಿಲ್ಲವಾಗಿದೆ ಎಂದು ಸಂಘಟನೆಯ ರಾಜ್ಯ ಸಮಿತಿ ತನ್ನ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.



ಆದರ್ಶಪ್ರಾಯ ವ್ಯಕ್ತಿತ್ವ

ಎಸ್.ಎಫ್.ಐ. - ಡಿ.ವೈ.ಎಫ್.ಐ.


ವೃತ್ತಿಯಲ್ಲಿ ಶಿಕ್ಷಕರಾಗಿದ್ದ ಕಾಂ|| ಪಿ. ರಾಮಚಂದ್ರರಾವ್ ಶಿಕ್ಷಣ ಕ್ಷೇತ್ರದ ಕುರಿತು ಪ್ರಗತಿಪರ ದೃಷ್ಟಿಕೋನವುಳ್ಳವರಾಗಿದ್ದರು. ಹಾಗೂ ರಾಜ್ಯದ ಅನೇಕ ಪ್ರಗತಿಪರ ಪ್ರಜಾಸತ್ತಾತ್ಮಕ ವಿದ್ಯಾರ್ಥಿ-ಯುವಜನ ಚಳುವಳಿಯಲ್ಲಿ ಭಾಗವಹಿಸಿ ಪ್ರೋತ್ಸಾಹಿಸಿದ ಮಹಾನ್ ಚೇತನವಾಗಿದ್ದರು. 'ಮಾಸ್ಟ್ರು' ಎಂದೇ ಪರಿಚಿತರಾಗಿದ್ದ ಅವರು ಶಿಕ್ಷಣ ಕ್ಷೇತ್ರದ ಬಗ್ಗೆ ಆಳವಾದ ಅಭ್ಯಾಸವುಳ್ಳವರಾಗಿದ್ದರು ಎಂದು ಎಸ್.ಎಫ್.ಐ., ಡಿ.ವೈ.ಎಫ್.ಐ. ರಾಜ್ಯ ಸಮಿತಿಗಳು ತಮ್ಮ ಶ್ರದ್ಧಾಂಜಲಿ ಅರ್ಪಿಸಿವೆ.

ತಮ್ಮ ಶಿಕ್ಷಕ ಹುದ್ದೆಯನ್ನು ತ್ಯಜಿಸಿ, ಜನತೆಯನ್ನು ಶೋಷಣೆಯ ವಿರುದ್ಧ-ಜ್ವಲಂತ ಸಮಸ್ಯೆಗಳ ವಿರುದ್ಧ ಸಂಘಟಿಸಲು ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟ ವ್ಯಕ್ತಿತ್ವ ಅವರದು. ರೈತರು-ಕಾರ್ಮಿಕರು ಹಾಗೂ ವಿದ್ಯಾರ್ಥಿ ಯುವಜನರ ಅನೇಕ ಚಳುವಳಿಗಳಲ್ಲಿ ಭಾಗವಹಿಸಿದವರಾಗಿದ್ದಾರೆ. ಅವರ ಸರಳ ಹಾಗೂ ತ್ಯಾಗದ ಜೀವನ ರಾಜ್ಯದ ವಿದ್ಯಾರ್ಥಿ ಯುವಜನರಿಗೆ ಆದರ್ಶ ಪ್ರಾಯವಾಗಿತ್ತು ಎಂದು ಎಸ್.ಎಫ್.ಐ. - ಡಿ.ವೈ.ಎಫ್.ಐ. ರಾಜ್ಯ ಸಮಿತಿಗಳು ತಮ್ಮ ಸಂತಾಪ ಸಂದೇಶದಲ್ಲಿ ಹೇಳಿವೆ.

ಧೀರ ಹೋರಾಟಗಾರ

ಇ.ಕೆ. ನಾಯನಾರ್

ಕಾಮ್ರೇಡ್ ಪಿ. ರಾಮಚಂದ್ರರಾವ್ ಬಡವರಿಗಾಗಿ, ದಲಿತರಿಗಾಗಿ ತಮ್ಮನ್ನರ್ಪಿಸಿಕೊಂಡ ಒಬ್ಬ ಧೀರ ಹೋರಾಟಗಾರ, ತಮ್ಮ ಜೀವನವನ್ನೇ ಕಮ್ಯುನಿಸ್ಟ್ ಆಂದೋಲನಕ್ಕಾಗಿ ಮುಡಿಪಿಟ್ಟವರು ಎಂದು ತನ್ನ ಸಂತಾಪ ಸಂದೇಶದಲ್ಲಿ ಹೇಳಿರುವ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಸದಸ್ಯ ಹಾಗೂ ಕೇರಳದ ಮುಖ್ಯಮಂತ್ರಿ ಇ.ಕೆ. ನಾಯನಾರ್ "ಅವರ ನಿಧನ ನಮ್ಮ ಪಕ್ಷಕ್ಕೆ ಹಾಗೂ ಜನಸಾಮಾನ್ಯರಿಗೆ ಒಂದು ದೊಡ್ಡ ನಷ್ಟ" ಎಂದಿದ್ದಾರೆ.



ಪ್ರಚಂಡ ಹೋರಾಟಗಾರ, ಕಾರ್ಮಿಕರ ಮಾರ್ಗದರ್ಶಿ

ಸಿಐಟಿಯು ಶ್ರದ್ಧಾಂಜಲಿ


ಮಂಗಳೂರಿನ ಬೀಡಿ, ಹೆಂಚು ಮತ್ತಿತರ ಅಸಂಘಟಿತ ಬಡ ಕಾರ್ಮಿಕರ ನಡುವೆ ತನ್ನ ಸಾರ್ವಜನಿಕ ಜೀವನ ಆರಂಭಿಸಿದ ಕಾಂ|| ರಾಮಚಂದ್ರರಾವ್ ಮೊದಲು ಎಐಟಿಯುಸಿಯ ಪ್ರಮುಖ ಮುಖಂಡರಾಗಿ ಬೆಳೆದರು. ನಂತರ ಸಿಐಟಿಯು ಸ್ಥಾಪನೆ ಯಾದಾಗ ದ.ಕ. ಜಿಲ್ಲಾ ಕಾರ್ಯದರ್ಶಿ ಯಾಗಿ, ನಂತರ ಸ್ವಲ್ಪಕಾಲ ಸಿಐಟಿಯು ಬೆಳವಣಿಗೆಯ ಒಂದು ಪ್ರಮುಖ ಘಟ್ಟದಲ್ಲಿ ಅದರ ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆಗಿದ್ದ ಅವರು ಯಾವ ರಾಜಿಗೂ ಇಳಿಯದ ಹೋರಾಟಗಾರರು, ಪ್ರಚಂಡ ಚಳುವಳಿಗಾರರು ಎಂದು ಸಿಐಟಿಯು ರಾಜ್ಯ ಸಮಿತಿ ಶ್ರದ್ಧಾಂಜಲಿ ಅರ್ಪಿಸಿದೆ. ಅವರ ನಿಧನದಿಂದ ಸಿಐಟಿಯು ಹಾಗೂ ಕಾರ್ಮಿಕ ವರ್ಗ ತನ್ನ ಒಬ್ಬ ಮಿತ್ರನನ್ನು, ತಾತ್ವಿಕನನ್ನು ಹಾಗೂ ಮಾರ್ಗದರ್ಶಿಯನ್ನು ಕಳಕೊಂಡಿದೆ ಎಂದು ಕಂಬನಿ ಮಿಡಿದಿದೆ.

ಪಕ್ಷಕ್ಕೆ ಅಪಾರ ನಷ್ಟ

ಶೈಲೇನ್‌ದಾಸ್ ಗುಪ್ತ

ಅಧ್ಯಾಪಕರ ಆಂದೋಲನದ ಮೂಲಕ ಪಕ್ಷವನ್ನು ಸೇರಿ ನಂತರ ಒಬ್ಬ ಜನಪ್ರಿಯ ರೈತ ಮುಖಂಡರಾಗಿ ಬೆಳೆದ ಕಾಂ|| ಪಿ. ರಾಮಚಂದ್ರರಾವ್‌ರವರ ಆಕಸ್ಮಿಕ ನಿಧನ ಕರ್ನಾಟಕದಲ್ಲಿ ನಮ್ಮ ಪಕ್ಷಕ್ಕೆ ಒಂದು ದೊಡ್ಡ ನಷ್ಟವೆಂದಿರುವ ಸಿ.ಪಿ.ಐ.(ಎಂ) ಪಶ್ಚಿಮ ಬಂಗಾಳದ ರಾಜ್ಯ ಸಮಿತಿಯ ಕಾರ್ಯದರ್ಶಿಗಳಾದ ಶೈಲೇನ್ ದಾಸ್‌ಗುಪ್ತಾ ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಪರವಾಗಿ "ಕಾಮ್ರೇಡ್ ರಾವ್ ಅವರಿಗೆ ಗೌರವ ಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತೇವೆ ಹಾಗೂ ಕರ್ನಾಟಕದಲ್ಲಿನ ಎಲ್ಲಾ ಪಕ್ಷದ ಸದಸ್ಯರುಗಳು ಹಾಗೂ ಹಿತೈಷಿಗಳು, ದುಃಖತಪ್ತ ಕುಟುಂಬದ ಸದಸ್ಯರಿಗೆ ಆಳವಾದ ಸಂತಾಪವನ್ನು ವ್ಯಕ್ತಪಡಿಸುತ್ತೇವೆ" ಎಂದು ಸಂದೇಶ ಕಳಿಸಿದ್ದಾರೆ.

ಗುಲ್ಬರ್ಗದಲ್ಲಿ ನಡೆದ ಪಕ್ಷದ 15ನೇ ರಾಜ್ಯ ಸಮ್ಮೇಳನದಲ್ಲಿ



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by P.Ramachandra Rao for Communist Party of India (Marxist), Karnataka State Committee, EDITOR: P.RAMACHANDRA RAO